# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೩ | ನೋಂದಣಿ ಸಂಖ್ಯೆ : KARBIL / 2005 / 16123 | ಮಾರ್ಚ್ - 2014 | ಸಂಚಿಕೆ ೩


**ಮುಂದಿನ ವಿಶೇಷ ಕಾರ್ಯಕ್ರಮ : ದಿನಾಂಕ 06-04-2014 ಆದಿತ್ಯವಾರದಂದು ಶ್ರೀ ಸಭಾದಲ್ಲಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ವರ್ಧಂತ್ಯುತ್ಸವ**

# ಕಕ್ಕಿನೇಜಿಯಲ್ಲಿ "ಸದನದ ಕಲಾವಿದ"ರಿಂದ ಭರ್ಜರಿ ಯಕ್ಷಗಾನ

ತಾ. 2-2-2014ರಂದು ಸದನದ ಕಲಾವಿದರು ಸಂಜೆ ಗಂಟೆ 6-00ಕ್ಕೆ ಬೆಳ್ತಂಗಡಿಯ ಕಕ್ಕಿನೇಜಿ ತಲುಪಿದಾಗ ಅಭೂತಪೂರ್ವ ಸ್ವಾಗತವನ್ನು ನೀಡಲಾಯಿತು. ಅದ್ಭುತ ಪ್ರಕೃತಿ ಸೌಂದರ್ಯವನ್ನೊಳಗೊಂಡ ಈ ಪರಿಸರವು ನಗರವಾಸಿಗಳಿಗೆ ಒಂದು ವಿಸ್ಮಯ ಪ್ರದೇಶವಾಗಿ ಕಂಡಿತು. ಮೊಬೈಲ್, ಕ್ಯಾಮರಗಳು ಚಕಚಕನೆ ಕೆಲಸ ಮಾಡಿದವು.

ಮುಖವರ್ಣಿಕೆ, ವೇಷಭೂಷಣಗಳೊಂದಿಗೆ ಕಲಾವಿದರು ತಯಾರಾಗುತ್ತಿದ್ದಂತೆ ಸಭಾ ಕಾರ್ಯಕ್ರಮವು "ದೇಶ ಭಕ್ತಿ–ಹಿಂದೂ ಶಕ್ತಿ" ಎಂಬ ವಿಷಯಗಳೊಂದಿಗೆ ಸಭಿಕರನ್ನು ಮೋಡಿಮಾಡಿತು. ಸದನದ ಯಕ್ಷಗುರು ಶ್ರೀ ಸಂಜಯ ಕುಮಾರ್ ಪಲಿಮಾರ್‌ರವರಿಗೆ ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀ ವಾಸುದೇವ ರಾವ್, ಶ್ರೀ ಶಿವಾನಂದ ರಾವ್ ಸಹೋದರರು ಕಾರ್ಯಕ್ರಮ ಸಂಯೋಜಿಸಿದ ಶ್ರೀ ಉದಯಕುಮಾರ್ ಅಡೂರ್ ಹಾಗೂ ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್ ಸನ್ಮಾನ ನೆರವೇರಿಸಿದರು.

ಚೆಂಡೆ, ಮದ್ದಳೆಗಳು ಮಾರ್ದನಿಸುತ್ತಿದ್ದಂತೆ ಭಾಗವತರಾದ ಶ್ರೀ ಗಣೇಶ ಭಟ್ ಹೊಸಮೂಲೆಯವರು ಸುಶ್ರಾವ್ಯವಾಗಿ "ಗಜಮುಖಗೆ ಗಣಪಗೆ" ಎಂದು ಪ್ರಾರಂಭಿಸಿ "ಜಾಂಬವತಿ, ಕಲ್ಯಾಣ" ಯಕ್ಷಗಾನ ಬಯಲಾಟ ವಿದ್ಯುಕ್ತವಾಗಿ ಆರಂಭಗೊಂಡಿತು. ಭರ್ಜರಿ ಚೆಂಡೆ ವಾದನದೊಂದಿಗೆ ಪ್ರವೇಶ ಮಾಡಿದ ಸತ್ರಾಜಿತ (ಶ್ರೀಮತಿ ಶೈಲಜಾ ಶ್ರೀಕಾಂತ್) ಸ್ವಗತ ನುಡಿದು ಕಥಾ ಪ್ರಾರಂಭವಾದಂತೆ ಬೇವಿಚರ ಮುದಿಯಪ್ಪಣ್ಣ (ಶ್ರೀ ಪಿ. ಶ್ರೀಕಾಂತ ರಾವ್) ಸಹಚರರೊಂದಿಗೆ ಪ್ರವೇಶಿಸಿ ಹ್ಯಾಸಮಿಶ್ರಿತ ಮಾತುಗಳೊಂದಿಗೆ ಕಾಡುಪ್ರಾಣಿಗಳ ಉಪಟಳ ಬಗ್ಗೆ ದೂರುತ್ತಾನೆ. ಅಭಯವಿತ್ತೊಡನೆ ತಮ್ಮ ಪ್ರಸೇನ (ಸಬ್ಬಣಕೋಡಿ ರಾಮ ಭಟ್) ವೇದಿಕೆ ಪುಡಿಗುಟ್ಟುವಂತೆ ಪ್ರವೇಶ ಮಾಡಿ ಬೇಟೆಗೆ ತೆರಳಲು ಇಚ್ಛಿಸಿದಾಗ ಸತ್ಯಜಿತ ಶಮಂತಕಮಣಿಯನ್ನು ನೀಡಿ ಅನುಮತಿ



ನೀಡುತ್ತಾನೆ. ಬೇಟೆ ಹೊರಡಲು ಸೇನಾಧಿಪತಿಯನ್ನು ಕರೆದಾಗ (ಶ್ರೀ ನಾಗರಾಜ ಶರ್ಮ) ವೀರಾವೇಶದಿಂದ ಪ್ರವೇಶ ಮಾಡುತ್ತಾನೆ. ಅವನನ್ನು ಕೂಡಿಕೊಂಡು ಚಿಮ್ಮೇಳುವ ಗಿರಕಿಯೊಂದಿಗೆ, ಏರುಪದದೊಂದಿಗೆ, ಹಾಸ್ಯ ಲೇಪದ ಬೇಟೆಯ ದೃಶ್ಯವು ಪ್ರೇಕ್ಷಕರಲ್ಲಿ ಬೆರಗು ಮೂಡಿಸಿತು. ನಂತರ ಪ್ರವೇಶವಾದದ್ದು ಭೀಕರ ರೂಪದ ಕೇಸರಿ (ಶ್ರೀ ಉದಯ ಕುಮಾರ್ ಅಡೂರ್) ಬೆಂಕಿಯ ದೊಂದಿಯೊಂದಿಗೆ ಬಹುದೂರದಿಂದ ವೇದಿಕೆಯತ್ತ ನಡೆದಾಗ ನಿಜ ಸಿಂಹವೋ ಎಂಬಂತೆ ಕಂಡುಬಂತು. ಅದ್ಭುತ ಕುಣಿತ, ಮಾತುಗಾರಿಕೆಯ ಯುದ್ಧವು, ಪ್ರಸೇನನ ಮರಣದೊಂದಿಗೆ ಮುಕ್ತಾಯವಾಯಿತು. ಇತ್ತ ಬಲರಾಮ (ಶ್ರೀ ಸಂಜಯ್ ಕುಮಾರ ರಾವ್) ಪ್ರವೇಶ ಪಡೆದು ಒಡ್ಡೋಲಗ ನಡೆಸಿದಾಗ ಜಗಳ ತಂದಿಡುವ ನಾರದ (ಶ್ರೀ ರವಿ ಅಲೆವೂರಾಯ) ಬಂದು ಬಲರಾಮ, ಶ್ರೀಕೃಷ್ಣನೊಡನೆ (ಶ್ರೀಮತಿ ಅರುಣ ಸೋಮಶೇಖರ್) ಮುನಿಸುವಂತೆ ಸನ್ನಿವೇಶ ನಿರ್ಮಿಸುತ್ತಾನೆ. ಪರಿಪರಿಯಾಗಿ ಹೇಳಿದರೂ ಸಮಾಧಾನಗೊಳ್ಳದ ಬಲರಾಮನನ್ನು ಸಂತುಷ್ಟಗೊಳಿಸಲು ಕೃಷ್ಣ ಶಮಂತಕಮಣಿಯನ್ನು ಹುಡುಕುತ್ತಾ ಕಾಡಿಗೆ ತೆರಳುತ್ತಾನೆ. ಇತ್ತ ಕೇಸರಿಯೊಂದಿಗೆ ಯುದ್ಧ ನಡೆದು ಜಾಂಬವಂತ (ಶ್ರೀ ನಾಗರಾಜ್ ವರ್ಕಾಡಿ) ಶಮಂತಕಮಣಿಯನ್ನು ತನ್ನ ಗುಹೆಗೆ ತಂದು ಮಗನ ತೊಟ್ಟಿಲಿಗೆ ಕಟ್ಟುತ್ತಾನೆ. ಪಾಂಚಜನ್ಯ ಶಬ್ದದಿಂದ ಬೆದರಿದ ಜಾಂಬವತಿ (ಶ್ರೀಮತಿ ಶಾರದಾ ಪ್ರಸಾದ್) ಸಹಾಯಕ್ಕಾಗಿ ಬೊಬ್ಬಿಡುತ್ತಿದ್ದಂತೆ ಧಾವಿಸಿದ ಜಾಂಬವಂತ ಶ್ರೀಕೃಷ್ಣನೊಡನೆ ಮಾತಿನ ಚಾಕಚಕ್ಯತೆಯೊಂದಿಗೆ ಸಮರಕ್ಕೆ ಆಹ್ವಾನ ನೀಡುತ್ತಾನೆ. ತಮ್ಮ ಸಾಮರ್ಥ್ಯಗಳ ಬಗ್ಗೆ ಹೇಳಿಕೊಂಡು ಭರ್ಜರಿ ಯುದ್ಧವೇ ನಡೆಯುತ್ತದೆ. ಬಳಲಿದ ಜಾಂಬವಂತನಿಗೆ ಕೃಷ್ಣ ರಾಮನಾಗಿ ಕಂಡು ಬರುತ್ತಾನೆ. ಕರುಣಾಪೂರಿತ ಹಿಮ್ಮೇಳದ ಹಾಡಿಗೆ ಜಾಂಬವಂತ ದುಃಖರಸದಿಂದ ಪ್ರಭುವಿನೊಡನೆ ಹೋರಾಡಿದ್ದಕ್ಕಾಗಿ ಮರುಗುತ್ತಾನೆ. ಸಂತೈಸಿದ ಶ್ರೀಕೃಷ್ಣನಿಗೆ ಶಮಂತಕಮಣಿಯನ್ನಿತ್ತು, ಮಗಳನ್ನಿತ್ತು ಜಾಂಬವಂತ ಕೃತಾರ್ಥನಾಗುತ್ತಾನೆ. "ಜಾಂಬವತಿ ಕಲ್ಯಾಣ" ಪ್ರಸಂಗವು ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ಸದಸ್ಯರು ತಮ್ಮ ಪೂರ್ಣ ಪ್ರಮಾಣದ ಕಲಾವಂತಿಕೆಯನ್ನು ತೊಡಗಿಸಿ ಅಭೂತಪೂರ್ವ ಪ್ರದರ್ಶನ ನೀಡಿದರಲ್ಲದೆ ನಮ್ಮನ್ನು ಕರೆಸಿದ ಕಕ್ಕಿನೇಜಿ ಮನೆಯವರು ಹೃದಯತುಂಬಿ ಕೊಂಡಾಡುವಂತೆ ಮಾಡಿದರು. ಕಾರ್ಯಕ್ರಮ ಸಂಯೋಜಿಸಿದ ಶ್ರೀ ಉದಯಕುಮಾರ್ ಅಡೂರ್‌ರವರಂತೂ ಶ್ರಮ ಸಾರ್ಥಕವಾದ ಸಂತೋಷದಲ್ಲಿ ತೇಲಾಡುತ್ತಿದ್ದರು. ಭಾಗವಹಿಸಿದ ಕಲಾವಿದರು ತಮ್ಮ ಕರ್ತವ್ಯ ಹಾಗೂ ಕಲಾಪ್ರೌಢಿಮೆ ಮೆರೆದ ಸಂತೋಷದಲ್ಲಿ ಆ ನಡುರಾತ್ರಿಯಲ್ಲಿಯೂ ನಿದ್ದೆಗೆ ಶರಣಾಗದೆ ಮಾತಿನ ಮಂಟಪ ಕಟ್ಟುತ್ತಾ ಮನೆ ತಲುಪಿದರು. "ಇನ್ನೂ ಹತ್ತು ವರುಷಗಳ ಕಾಲ ಯಕ್ಷಗಾನ ನೋಡದಿದ್ದರೂ ಇದೇ ನೆನಪು ಸದಾ ನಮ್ಮಲ್ಲಿರುತ್ತದೆ" ಎಂದು ಹಿರಿಯರೊಬ್ಬರು ಉದ್ಗರಿಸಿದಾಗ ಯಕ್ಷವೇಷಕಟ್ಟಿದ ಕಲಾವಿದರಿಗೆ ತಮ್ಮ ಜೀವನ ಸಾರ್ಥಕವೆಂದೆನಿಸಿತು.

**ವರದಿ: ಶ್ರೀ ಪಿ. ಶ್ರೀಕಾಂತ್ ರಾವ್ ಮಂಗಳೂರು**


**ಚಿತ್ರ : ಶ್ರೀ ರಘುವೀರ್ ಪೆರ್ಡೂರು**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಬಿಜೈ ರಸ್ತೆ, ಮಂಗಳೂರು**

ಸಮಾಜ ಬಾಂಧವರೇ,

**ದಿನಾಂಕ 06-04-2014 ಆದಿತ್ಯವಾರದಂದು ಶ್ರೀ ಸಭಾದ ವತಿಯಿಂದ**



**ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ**

**'ವರ್ಧಂತ್ಯುತ್ಸವ'ವು**

ಶ್ರೀ ಸುಬ್ರಹ್ಮಣ್ಯ ಸಭಾ ಸದನದಲ್ಲಿ ಸಂಪನ್ನಗೊಳ್ಳಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀ ಗುರುಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ವಿನಂತಿಸುತ್ತೇವೆ.

**ಅಧ್ಯಕ್ಷರು ಮತ್ತು ಸರ್ವ ಸದಸ್ಯರು**
ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

**ಕಾರ್ಯಕ್ರಮಗಳು**

| | |
|---|---|
| ಬೆಳಗ್ಗೆ 10-00ರಿಂದ : | **ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ, ಲಲಿತ ಸಹಸ್ರನಾಮ ಹಾಗೂ ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ** |
| ಬೆಳಗ್ಗೆ 10-30ರಿಂದ : | **ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಪ್ರಾರಂಭ** |
| ಬೆಳಗ್ಗೆ 11-00ರಿಂದ : | **ಧಾರ್ಮಿಕ ಉಪನ್ಯಾಸ** ಶ್ರೀ ಸಂಜಯ ರಾವ್ ಪಲಿಮಾರ್ ಇವರಿಂದ |
| ಮಧ್ಯಾಹ್ನ 12ರಿಂದ 12-30: | **ಮಹಾಪೂಜೆ, ಪ್ರಸಾದ ವಿತರಣೆ** |
| ಮಧ್ಯಾಹ್ನ 1-00ರಿಂದ : | **ಪ್ರಸಾದ ಭೋಜನ** |

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್**
**ಪುತ್ತೂರು**

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಕೃಷ್ಣ ಭಟ್**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**


## ನನ್ನಯ ಬೆಕ್ಕೆ




ಬೆಕ್ಕೆ ಬೆಕ್ಕೆ
ನನ್ನಯ ಬೆಕ್ಕೆ
ನನ್ನೊಡನಾಡಲು ಬಾ...ಬಾ...
ಹಾಲನು ಕೊಡುವೆ
ತಿಂಡಿಯ ಕೊಡುವೆ
ಚೆಂಡನು ಆಡಲು ಬಾ...ಬಾ...
ಕರಿ ಬಿಳಿ ಬಣ್ಣ
ರೋಮದ ನಯವಿದೊ ಅಣ್ಣ
ನಿನ್ನಯ ಮೊಗವನು ತೋರೋ ಬಾ...ಬಾ...

## ರಜದ ಮಜ

ಶಾಲೆಗೆ ರಜ
ಏನಿದು ಮಜ
ರಜದ ಮಜವೋ ಇಂದು ಅಮ್ಮಗೆ ಸಜ ॥
ಜೋರಿನ ಓಟ
ಮರಕೋತಿಯಾಟ
ನೋಡಿರಿ ಇಂದು ನಮಗೆ ಹಬ್ಬದೂಟ ॥
ಬೆಕ್ಕಿನೊಡನೆ ಆಟ
ನಾಯಿಗಳ ಕೂಟ
ಆಹಾ ಏನಿದು ನಮಗೆ ಪ್ರಾಣಿಗಳ ಕಾಟ ॥
ಬಳಪದ ಚೀಲ
ನೋಡಿರಿ ಅದರ ಕೋಲ
ಆಟದ ರಭಸಕೆ ಬಿಚ್ಚಿತು ಪುಸ್ತಕದ ಮೂಲ ॥

**–ವೀಣಾ ರಾವ್ ಯಂ.ಪಿ.**, ಶಿವಾಜಿನಗರ, ವಿಟ್ಲ

## ಜೀವ...



ಎಲ್ಲೆಲ್ಲೂ ಅರಳಿರುವೆ ನಳನಳಿಸಿ
ಕಣಿವೆ ಕಾಲುವೆಗಳಲಿ ಮೃಗ ಮನುಜನಾಗಿ
ಮಿಂಚಿರುವೆ ಫಳಫಳಿಸಿ ಝರಿಯಾಗಿ, ನದಿಯಾಗಿ
ನಿನದೇ ನಿನಾದ ಮಂಜುಳ ಧ್ವನಿ ಹೊರಹೊಮ್ಮಿ

ಬರುವಿಕೆಗೆ ಪುಳಕ ಆನಂದ ಆತುರ
ನರಳಿಕೆಗೆ ಕೆರಳಿಕೆಗೆ ಕಳವಳ ಕಾತುರ
ನೀ ಹೊರಟೆಯಾದರೆ ಮಂಕು ಅಳು ಆತಂಕ
ಕತ್ತಲೆಯ ಕವಿದು ಮೌನವೇ ಭ್ರಮಿಸುವುದು

ನಿನ್ನ ಇರುವಿಕೆಗೆ ಸ್ವಾಸ್ಥ್ಯಕ್ಕೆ ಸುಸ್ಥಿತಿಗೆ
ಕೋರ್ಟು ಕಛೇರಿ ಸರಕಾರ ಆಸ್ಪತ್ರೆ ಶಾಲೆ
ವೈಭವದ ಮರುಧ್ವನಿ ವೈಖರಿಯ ಸಂಮಾನ
ಹಾರ ತುರಾಯಿ ಕಾರುತೇರು

ಮೂರು ದಿನಗಳ ಬಾಳಿಗೆ ಪ್ರಚಾರ ಪ್ರವಾಹ
ದೇವ ದೇವತೆಗಳಿಗುಪಚಾರ ಮಂತ್ರ ತಂತ್ರ
ಹೊರಡುವ ಮೊದಲು ತಮಟೆಯ ಬದಲು
ಕಂಬನಿಯ ಧಾರೆ ಎರಿ ದಯೆದಾನ ನೀಡು

ಸಾವಿರದ ಜನ ಬರಲಿ ಸಾವಿರದ ದಿನವಿರಲಿ
ದಿನದಿನವು ಹೊಸಬಾಳ ನೇಯಲಿ
ಹೊಸ ಭಾವ ಹೊಸ ಜೀವ ನವರಸವ ಚಿಮ್ಮುತ
ಹೊರಬರಲಿ ನರ್ತಿಸುತ ದಿವ್ಯತೆಗೆ ಒಯ್ಯುತ
"ಪುರುಷ ಏವೇದಗ್ಂ ಸರ್ವಂ"

**ಎಮ್. ಆರ್. ವಾಸುದೇವ, ಮಂಗಳೂರು**

## ಯುಗಾದಿ ಹಬ್ಬ



ಓಡೋಡುತ ಬರುತಿದೆ ಮರಳಿ ಯುಗಾದಿ ಹಬ್ಬವು ।
ಹೊಸ ವರುಷದಿ ಹೊಸ ಬಯಕೆಯ ತೋರಣವು ॥
ಯುಗದ ಆದಿ ಯುಗಾದಿಯನು ಹೊಸ ಸಂತೋಷದಿ ಆಚರಿಸೋಣ ।
ಹಳೆಯ ಪೊರೆಯ ಕಳಚಿ ಹೊಸ ಭಾವ ಜಲಧಿ ಮೀಯೋಣ ॥

ಜೀವನ ಎಂದೂ ಹಳತಾಗದು ಅದು ನಿತ್ಯ ನೂತನವೇ ಸತ್ಯ ।
ನಿನ್ನೆಯದನ್ನ ಮರೆತು ನಾಳೆಯ ಸುದಿನಕ್ಕಾಗಿ ಹಂಬಲಿಸುವಾ ನಿತ್ಯ ॥

ಸರಸ, ಸಂಭ್ರಮ, ಪುಳಕೋತ್ಸವದಿ ಹೊಸ ಕಾಲವ ಸ್ವಾಗತಿಸೋಣ ।
ಬೇವು–ಬೆಲ್ಲವ ತಿಂದು ಸುಖ ದುಃಖವ ಸಮರಸದಿಂದ ಸ್ವೀಕರಿಸೋಣ ॥

ಕಷ್ಟ–ನಷ್ಟ, ಸೋಲು ಸೆಣಸುಗಳೇನೇ ಬರಲಿ ಬದುಕು ಬಂಗಾರವಾಗಲಿ ।
ತಪ್ಪು–ಒಪ್ಪು, ನಿರಾಸೆಗಳೇನೇ ಇರಲಿ ಬದುಕು ಬರಡಾಗದಿರಲಿ ॥

ನಿನ್ನೆಯ ಕಹಿಯನು ಮರೆತು ನಾಳಿನ ಸಿಹಿಗೆ ಸಿದ್ಧರಾಗೋಣ ।
ಹೊಸದಿನಗಳ ಸವಿಯಿಣ್ಣಲು ಹಬ್ಬವು ಬೇಗನೆ ಬರಲೆಂದು ಬೇಡೋಣ ॥

ಹಬ್ಬದಂದು ಹೊಸ ಬಟ್ಟೆಯ ಧರಿಸಿ, ಪೂಜೆಯ ಮಾಡಿ ಹೋಳಿಗೆಯೂಟವ ಮಾಡೋಣ ।
ಬಂಧು ಮಿತ್ರರಿಗೆಲ್ಲ ಶುಭಾಶಯ ಹೇಳಿ ಬೇವು–ಬೆಲ್ಲದ ಸವಿಯ ಸವಿಯೋಣ ॥

ದೇಶದ ಜನತೆಗೆ ಯುಗಾದಿ ಹಬ್ಬವು ಸುಖ–ಸಮೃದ್ಧತೆಯ ತರಲಿ ।
ನೋವು–ಚಿಂತೆಗಳೆಲ್ಲ ತೊಲಗಿ ಹೊಂಗನಸಿನ ತೇರಲಿ ಕೊಂಡೊಯ್ಯಲಿ ॥

**ಶ್ರೀಮತಿ ಮಂಜುಳಾ ಮುರಳೀಧರ್ ರಾವ್, ಮಂಗಳೂರು**


## ಒಂದು ವಿಜ್ಞಾಪನೆ

'ಜ್ಞಾನಶಕ್ತಿ' ಪತ್ರಿಕೆಯನ್ನು ಆರ್ಥಿಕವಾಗಿ ಸುದೃಢಗೊಳಿಸುವ ದೃಷ್ಟಿಯಿಂದ ಸಮಾಜ ಬಾಂಧವರು ಉದಾರ ಧನಸಹಾಯವನ್ನು ಹಾಗೂ ಜಾಹೀರಾತುಗಳನ್ನು ನೀಡಿ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

| ಜಾಹೀರಾತು ದರ | |
|---|---|
| | 1) 6 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 600/- |
| | 2) 12 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 1000/- |



## ಸಿ. ಯಂ. ರಾವ್ ಕಟಪಾಡಿ



ಯಶಸ್ವಿ ವಾಸ್ತುಶಾಸ್ತ್ರಜ್ಞರು ಮತ್ತು ಜ್ಯೋತಿಷ್ಯರು



***ಶ್ರೀ ಮುರಳೀಧರ ರಾವ್***
***'ಅನುಗ್ರಹ', ಚರ್ಚ್ ರೋಡ್, ಕಟಪಾಡಿ - 574 105***
ಮೊಬೈಲ್ : 9741816166
ತಪ್ಪದೆ ವೀಕ್ಷಿಸಿ, ಸ್ಪಂದನ ಟಿ.ವಿ. ವಾಹಿನಿಯಲ್ಲಿ 'ಈಶಾವಾಸ್ತು'
ಪ್ರತಿ ಭಾನುವಾರ ಪೂರ್ವಾಹ್ನ 9-00ರಿಂದ 10-00ರ ತನಕ


## ಶ್ರೀ ಸದಾಶಿವ ದೇವಸ್ಥಾನದಲ್ಲಿ ನಡುದೀಪೋತ್ಸವ



ಕೂಡ್ಲು ಶಿವಮಂಗಲ ಶ್ರೀ ಸದಾಶಿವ ದೇವಸ್ಥಾನದಲ್ಲಿ ನಡುದೀಪೋತ್ಸವ ಜರುಗಿತ್ತು. ದೇವರ ಘೋಷಾ ಯಾತ್ರೆ ರಾಮದಾಸ ನಗರಕ್ಕೆ ತೆರಳಿ ಅಲ್ಲಿ ಪೂಜೆ, ಸುಡುಮದ್ದು ಪ್ರದರ್ಶನ ಜರುಗಿತು. ಅನಂತರ ಆನುವಂಶಿಕ ಮೊಕ್ತೇಸರ ಅವರ ಮನೆಯಲ್ಲಿ ಪೂಜೆ ಜರುಗಿ ಉತ್ಸವ ಕೊನೆಗೊಂಡಿತು.


***ವರದಿ : ಶಾನ್, ಕಾಸರಗೋಡು***

## ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಪ್ರತಿಷ್ಠಾ ವಾರ್ಷಿಕೋತ್ಸವ ಮತ್ತು ಸನ್ಮಾನ



**ಕಡಬ** ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಫೆಬ್ರವರಿ 6ರಂದು ಬ್ರಹ್ಮಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ 27ನೇ ಪ್ರತಿಷ್ಠಾ ವಾರ್ಷಿಕೋತ್ಸವ ಜರಗಿತು. ಬೆಳಗ್ಗೆ ಸುಪ್ರಭಾತ, 12 ಕಾಯಿ ಮಹಾಗಣಪತಿ ಹವನ, ಶ್ರೀ ವಿಶ್ವನಾಥ ಸ್ವಾಮಿಗೆ ರುದ್ರಾಭಿಷೇಕ, ಮಹಾಪೂಜೆ ಹಾಗೂ ರಾತ್ರಿ ರಂಗಪೂಜೆ ನಡೆಯಿತು. ಸಾಯಂಕಾಲ ಊರವರಿಂದ ಹಾಗೂ ಸಮಾಜ ಬಾಂಧವರಿಂದ ಭಜನೆ, ನೃತ್ಯ ಹಾಗೂ ಮನೋರಂಜನಾ ಕಾರ್ಯಕ್ರಮ ನಡೆದ ಬಳಿಕ 75 ವರ್ಷ ಮೀರಿದ ಸಮಾಜದ ಹಿರಿಯರಾದ ತಲೇಕಿ ಲಲಿತಮ್ಮ, ತಲೇಕಿ ಮಹಾಲಕ್ಷ್ಮಿ ಅಮ್ಮ, ಕೋಲ್ಪೆ ಸೌಭದ್ರಮ್ಮ, ಕೊಳಂದೂರು ಸತ್ಯವತಿ ಅಮ್ಮ ಇವರನ್ನು ಶಾಲು ಹೊದಿಸಿ, ಸೀರೆ, ಫಲಪುಷ್ಪಗಳನ್ನು ನೀಡಿ ಸನ್ಮಾನಿಸಲಾಯಿತು. ಬಳಿಕ ಕೊಲ್ಲಂಗಾನ ಮೇಳದವರಿಂದ ಶ್ರೀಪತಿ–ಶ್ರೀಮತಿ ಎಂಬ ತುಳು ಯಕ್ಷಗಾನ ಬಯಲಾಟ ಮತ್ತು ಭಾರ್ಗವ ವಿಜಯ ಎಂಬ ಪೌರಾಣಿಕ ಯಕ್ಷಗಾನ ಬಯಲಾಟ ನಡೆಯಿತು. ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಹರ್ಷಕುಮಾರ್ ಕೇದಗೆ, ಪ್ರಮೋದ್ ಅಟೋಮೊಬೈಲ್ಸ್, ಮಂಗಳೂರು ಇವರು ಈ ವಾರ್ಷಿಕೋತ್ಸವದ ಪ್ರಾಯೋಜಕರಾಗಿದ್ದಾರೆ.

***ವರದಿ : ಕುಮಾರಿ ಪ್ರೀತಿಕಾ ರಾವ್, ಮಂಗಳೂರು***



## 'ನಮ್ಮ ಸಾಧಕರು'



### ಶ್ರೀ ಯೋಗೀಶ್ ರಾವ್, ಮುಂಡ್ಕೂರು

ದಿವಂಗತ ವಿಶ್ವನಾಥ ರಾವ್ ಮತ್ತು ಶ್ರೀಮತಿ ಗಿರಿಜಮ್ಮನವರ ನಾಲ್ಕನೇ ಪುತ್ರರಾದ ಪ್ರಸ್ತುತ ಮುಂಡ್ಕೂರಿನ ಕಂಗೂಳಿ ನಿವಾಸದಲ್ಲಿ ನೆಲೆಸಿರುವ ಶ್ರೀ ಯೋಗೀಶ್ ರಾವ್‌ರವರು "ಹನಿ ಹನಿ ಸೇರಿದರೆ ಹಳ್ಳ, ತೆನೆ ತೆನೆ ಸೇರಿದರೆ ಕೊಳ್ಳ" ಎಂಬ ತತ್ವವನ್ನು ಪಾಲಿಸಿ, ತನ್ನ ತಂದೆಯವರ ಉದ್ಯೋಗವನ್ನು ಮುಂದುವರಿಸಿ ಸಣ್ಣಪುಟ್ಟ ಅಡಿಗೆಯ ನೇತೃತ್ವವನ್ನು ವಹಿಸಿ ಇಂದು ಬಹುದೊಡ್ಡ ಪಾಕಪ್ರವೀಣರಾಗಿ ಬೆಳೆದಿದ್ದಾರೆ.

ಪುಂಡರಿಕಾಯಾಗ, ನವೋದಯ, ಅಖಿಲ ಭಾರತ ಸ್ಥಾನಿಕ ಸಮ್ಮೇಳನ ಇನ್ನೂ ಹತ್ತು ಹಲವು ಮಹಾಸಭೆಯಲ್ಲಿ ಪಾಲ್ಗೊಂಡು ಯಶಸ್ವಿ ಗಳಿಸಿ, ತನ್ನ ವೃತ್ತಿರಂಗದಲ್ಲಿ ದಿನದಿಂದ, ದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಮುಂದುವರಿಯುತ್ತಿದ್ದಾರೆ.

ಇತ್ತೀಚಿಗೆ ಡಿಸೆಂಬರ್‌ನಲ್ಲಿ ನಡೆದ ವಿಶ್ವಮಟ್ಟದ, 'ಆಳ್ವಾಸ್ ವಿಶ್ವ ನುಡಿಸಿರಿ ವಿರಾಸತ್'ನ ಬೃಹತ್ ಸಭೆಯಲ್ಲಿ ತನ್ನ ಗೌರವಕ್ಕೆ ಪಾತ್ರರಾದ ಸಂತ–ಸ್ನೇಹಿತ ಬಾಣಸಿಗರೊಂದಿಗೆ ನಾಲ್ಕೂ ದಿನವೂ ಲಕ್ಷಾಂತರ ಜನರಿಗೆ ನಿರಂತರವಾಗಿ ಸೇವೆಸಲ್ಲಿಸಿ ಇಂದು ಸಮಾಜದ ಕೀರ್ತಿಗೆ ಪಾತ್ರರಾಗಿದ್ದಾರೆ.

ತನ್ನ ಈ ಎಲ್ಲಾ ಅಭಿವೃದ್ಧಿಗೆ ಊರಿನ ಮಾತೆಯಾದ ಶ್ರೀ ದುರ್ಗಾಪರಮೇಶ್ವರೀ ತಾಯಿ ಹಾಗೂ ನಿರೀಕ್ಷೆಗೂ ಮೀರಿದ ಸಾಧನೆ ಗಳಿಸಲು ಪ್ರೇರಕವಾದ, ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಕೃಪೆಯೇ ಕಾರಣವೆಂದು ಭಕ್ತಿಪೂರ್ವಕವಾಗಿ ನೆನೆಯುತ್ತಾರೆ. ಶ್ರೀಮತಿ ರೇಖಾ, ಮಗ ಶೈಲೇಶ್, ಮಗಳು ಪರಿಮಳಾರವರ ಪುಟ್ಟ ಕುಟುಂಬವನ್ನು ಹೊಂದಿರುವ ಈ ಸಾಧಕನಿಗೆ ಇನ್ನೂ ಹೆಚ್ಚಿನ ಕೀರ್ತಿ ಯಶಸ್ಸನ್ನು ಬಯಸುತ್ತದೆ.

**"ಜ್ಞಾನಶಕ್ತಿ" ಬಳಗ**

## ಶ್ರೀ ಚಂದ್ರಶೇಖರ ದೇವಸ್ಥಾನದ ಸುತ್ತುಪೌಳಿಗೆ ಸಿಮೆಂಟ್ ಬ್ಲಾಕ್‌ನ ಹಾಸು

ಮೂಡುಬಿದಿರೆಯ ದೊಡ್ಮನೆ ರಸ್ತೆಯ ಪುರಾಣ ಪ್ರಸಿದ್ಧ ಶ್ರೀ ಚಂದ್ರಶೇಖರ ದೇವಸ್ಥಾನದ ಅರ್ಚಕ–ಮೊಕ್ತೇಸರ ಕೈಂಕರ್ಯ ನಡೆಸುತ್ತಿರುವ ಶ್ರೀ ರತ್ನಾಕರ ರಾವ್‌ರವರ ಸಹೋದರ ದಂಪತಿಗಳಾದ ಶ್ರೀ ಶ್ರೀನಿವಾಸ ರಾವ್ ಹಾಗೂ ಶ್ರೀಮತಿ ಉಮಾ ಹಾಗೂ ಮಕ್ಕಳು ಇದುವರೆಗೆ ದೇವರಿಗೆ ನೀಡಿದ ಹಲವಾರು ಪರಿಕರಗಳಂತೆ ಈ ಬಾರಿ ಶ್ರೀ ದೇವಾಲಯದ ಸುತ್ತುಪೌಳಿಗೆ ಸಿಮೆಂಟು ಬ್ಲಾಕ್‌ಗಳನ್ನು ಹಾಸಿ, ಬದಿಗೆ ಸಿಮೆಂಟಿನ ಗಾರೆಗೈದು ಸುಂದರಗೊಳಿಸಿದ್ದಾರೆ. ಇದರಿಂದಾಗಿ ದೈನಂದಿನ ದೇವರ ಪರಿಕ್ರಮದವರಿಗೆ ಮತ್ತು ಮಹಾಶಿವರಾತ್ರಿ ದಿನದ ಪರಿಕ್ರಮಕ್ಕೂ ಭಕ್ತಾದಿಗಳಿಗೆ ಬಹಳ ಸಹಕಾರಿಯಾಗಿದೆ. ಸುಮಾರು ಎಪ್ಪತ್ತೈದು ಸಾವಿರದ ಖರ್ಚಿನಲ್ಲಿ ನಡೆದ ಈ ಕಾರ್ಯಕ್ಕೆ ಅವರಿಗೆ ಭಗವಂತನು ಆಯುರಾರೋಗ್ಯಾದಿಗಳನ್ನು ನೀಡಲಿ ಎಂದು ಭಕ್ತಾದಿಗಳು ಹಾರೈಸಿದ್ದಾರೆ.

ಚಿತ್ರ ಮತ್ತು ವರದಿ : **ರಾಯೀ ರಾಜ್‌ಕುಮಾರ್, ಮೂಡುಬಿದಿರೆ**

*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*

**Near Vijaya Pen Mart**
**Hampankatta, Mangalore - 1**



## ಮಹಾರಾಷ್ಟ್ರದ ಮುಂಬೈಯಲ್ಲಿ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಧನಸಹಾಯ ನೀಡಿದ ದಾನಿಗಳು

| ಕ್ರ. ಸಂ. | ಹೆಸರು | ರೂಪಾಯಿ | ಕ್ರ. ಸಂ. | ಹೆಸರು | ರೂಪಾಯಿ | ಕ್ರ. ಸಂ. | ಹೆಸರು | ರೂಪಾಯಿ |
|---|---|---|---|---|---|---|---|---|
| 91. | ಶ್ರೀ ಕೆ. ರಘುರಾಮ ರಾವ್ | 1,00,000/- | 104. | ಮೆ। ಪವರ್ ರಬ್ಬರ್ ಇಂಡಸ್ಟ್ರೀಸ್ | 5,000/- | 117. | ಶ್ರೀ ಜಿ. ರಾಮಚಂದ್ರ ರಾವ್ | 2,001/- |
| 92. | ಶ್ರೀ ಯಂ. ಸುಭಾಸ್‌ಚಂದ್ರ | 50,000/- | 105. | ಶ್ರೀ ಎ. ಭುಜಂಗ ರಾವ್ | 5,000/- | 118. | ಡಾ. ಬಿ. ವಾಸುದೇವ ರಾವ್ | 2,001/- |
| 93. | ಶ್ರೀ ಯಂ. ಶ್ರೇಯಸ್ಸು | 25,000/- | 106. | ಶ್ರೀ ಪಿ. ಉಮೇಶ ರಾವ್ | 5,000/- | 119. | ಶ್ರೀಮತಿ ಗೀತಾ ಕೆ. ರಾವ್ | 2,000/- |
| 94. | ಶ್ರೀ ಯಂ. ಸಂದೇಶ್ | 25,000/- | 107. | ಶ್ರೀ ಶ್ರೀಪತಿ ಅಧಿಕಾರಿ | 5,000/- | 120. | ಶ್ರೀ ಶಶಿಧರ್ ರಾವ್ | 2,000/- |
| 95. | ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ | 10,000/- | 108. | ಶ್ರೀ ಯಂ. ಭಾಗ್ಯಚಂದ್ರ ರಾವ್ | 5,000/- | 121. | ಶ್ರೀ ಯು. ರಾಜಾರಾಮ ರಾವ್ | 2,000/- |
| 96. | ಶ್ರೀಮತಿ ಮೋಹಿನಿ ರಾಮಪ್ರಸಾದ್ | 10,000/- | 109. | ಶ್ರೀ ಯನ್. ಗೋವಿಂದಯ್ಯ | 3,000/- | 122. | ಶ್ರೀ ಡಿ. ನೀರಜ್ ರಾವ್ | 2,000/- |
| 97. | ಶ್ರೀ ಬಿ. ಜನಾರ್ದನ ರಾವ್ | 10,000/- | 110. | ಶ್ರೀ ಯಚ್.ವಿ. ಸುರೇಶರಾವ್, ಕೊಲ್ಲಾಪುರ | 5,000/- | 123. | ಶ್ರೀ ಎನ್. ಭಾಸ್ಕರ ರಾವ್ | 2,000/- |
| 98. | ಶ್ರೀ ಎ. ರಘುಪತಿ ರಾವ್ | 10,000/- | 111. | M/s. EXIM Cansultants | 5,000/- | 124. | ಶ್ರೀ ಪಿ. ಬಾಲಕೃಷ್ಣ ರಾವ್ | 2,000/- |
| 99. | ಶ್ರೀ ಎಸ್. ಸದಾಶಿವ ರಾವ್ | 10,000/- | 112. | ಶ್ರೀ ಎ. ಸುಬ್ರಹ್ಮಣ್ಯ ರಾವ್ | 3,000/- | 125. | ಶ್ರೀ ಪಿ. ಬಾಲಕೃಷ್ಣ ರಾವ್ | 2,000/- |
| 100. | ಶ್ರೀ ಎಸ್. ಸುರೇಶ್ ರಾವ್ | 5,011/- | 113. | ಶ್ರೀಮತಿ ಚಂದ್ರಾವತಿ ಕೆ. ರಾವ್ | 3,000/- | 126. | ಶ್ರೀ ಯಂ. ಸದಾಶಿವ ರಾವ್ | 2,000/- |
| 101. | ಶ್ರೀ ಬಿ. ಫಾಲಚಂದ್ರ ರಾವ್ | 5,000/- | 114. | ಡಾ. ಸುಧೀರ್ ರಾವ್ | 2,501/- | 127. | ಶ್ರೀ ಎಚ್. ಲಕ್ಷ್ಮೀನಾರಾಯಣ ರಾವ್ | 2,001/- |
| 102. | ಡಾ. ಪಿ. ಜಿ. ರಾವ್ | 5,000/- | 115. | ಶ್ರೀ ಐ. ಜಗನ್ನಾಥ ರಾವ್ | 2,500/- | 128. | ಶ್ರೀ ಕೆ. ಉಮೇಶ ರಾವ್ | 2,101/- |
| 103. | ಶ್ರೀ ಪಿ. ಚಂದ್ರಶೇಖರ ರಾವ್ | 5,000/- | 116. | ಶ್ರೀ ಬಿ. ಜಗಜೀವನ್ ರಾವ್ | 2,001/- | 129. | ಶ್ರೀ ಕೃಷ್ಣರಾಜ್ ವಿ. ಉಪಾಧ್ಯಾಯ | 2,000/- |

ಮುಂದುವರಿಯುವುದು

*Sri Hari Adyapady*
*Proprietor*

Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**

**2nd Floor, Ozanam Complex**
**Church Building, Main Road**
**BAJPE, MANGALORE**





**PRAVEEN KUMAR ADYAPADY**
**ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes :** Civil, Criminal, Motor Vehicles, A.C., D.C. Cases, Land Conversion, Registration etc.



**ಹೋಮಿಯೋಪತಿ ಹಾಗೂ**
**ಡಯಟ್ ಸಲಹೆ ಔಷಧಿಗಳಿಗಾಗಿ ಸಂದರ್ಶಿಸಿ.**

**ಡಾ. ಸುಶೀಲ ರಾವ್,** ಬಿ.ಎಚ್.ಎಮ್.ಎಸ್.
**ಹೋಮಿಯೋಪತಿ ಕನ್ಸಲ್ಟೆಂಟ್ ಆ್ಯಂಡ್ ಡಯಟಿಶಿಯನ್**
**ಸ್ಪರ್ಶ ಮೆಡಿಕಲ್ ಸೆಂಟರ್**
**ಬೆಂದೂರ್‌ವೆಲ್ ಸರ್ಕಲ್, ಮಂಗಳೂರು - 2**
ದೂರವಾಣಿ : 0824-4276666 ಮೊಬೈಲ್ : 9844063805



**SHARMA ENTERPRISES**

**KANKANADY, MANGALORE - 575 002**

**Mob. : 9844187083**

**Prop. :**
***Chethan Sharma***



ಲೋಕಭಾಷೆಯಾಗಿ

# ಪುಣ್ಯಕೋಟಿ

## ಗೋವಿನ ಹಾಡು

**ಲೇಖಕರು : ಬೆಳಗೆರೆ ಕೃಷ್ಣಶಾಸ್ತ್ರಿ**

ವೇದ ಉಪನಿಷತ್ತುಗಳು ನಮ್ಮ ಪ್ರಾಚೀನ ಕಾಲದ ಸಾಹಿತ್ಯಗಳು. ಉಪನಿಷತ್ತಿನಲ್ಲಿ ಹಲವಾರು ಕತೆಗಳಿವೆ. ಈ ಕತೆಗಳಲ್ಲಿ ಗೋವಿನ ಹಾಡಿನ ವಿಚಾರ ಇದೆ ಎಂದು ಮಿತ್ರ ಕಾಳಿಂಗ ಕೃಷ್ಣ ಹೇಳಿದ್ದರು. ಆದರೆ ಯಾವ ಉಪನಿಷತ್ತಿನ ಕತೆಯಲ್ಲಿ ಇದೆ ಎಂದು ಹೇಳಿದ್ದು ನೆನಪಿಲ್ಲ.

ಈ ಗೋವಿನ ಹಾಡಿನ ವಿಚಾರವಾಗಿ ಗಮನಿಸಬೇಕಾದ ಮುಖ್ಯಾಂಶಗಳ ಬಗ್ಗೆ ಕೆಲವು ಮಾತು. ನಮ್ಮಲ್ಲಿ ಸಾತ್ವಿಕ, ರಾಜಸ ಮತ್ತು ತಾಮಸ ಎಂಬ ಮೂರು ಗುಣಗಳಿವೆ. ತಾಮಸಕ್ಕೆ ಏನೂ ತಿಳಿಯುವುದಿಲ್ಲ. "ಮುಗ್ಧ – Innocent" ಅಂಥಾರಲ್ಲ ಅದು. ಈ ಕತೆಯಲ್ಲಿ ಹುಲಿ ರಾಜಸದ ಪ್ರತಿನಿಧಿ, ಗೋವು ಸಾತ್ವಿಕದ ಪ್ರತಿನಿಧಿ. ಇತರೆ ಗೋವುಗಳು, ಅದನ್ನು ಕಾಯುವ ಕಾಳಿಂಗ ಇವರೆಲ್ಲರೂ ತಾಮಸದ ಪ್ರತಿನಿಧಿಗಳು. ಈ ತಾಮಸ ಗುಣದವರಿಗೆ ಒಳ್ಳೆಯದು ಗೊತ್ತಾಗುವುದಿಲ್ಲ, ಕೆಟ್ಟದೂ ಗೊತ್ತಾಗುವುದಿಲ್ಲ.

ಹುಲಿಯು ಆರ್ಭಟಿಸಿ ಬರುತ್ತದೆ ಏಕೆಂದರೆ ಅದು ರಾಜಸದ ಪ್ರತೀಕ.

ಸಾತ್ವಿಕತೆಯ ಗೋವು ತನ್ನ ಕೋರಿಕೆಯನ್ನು ಹುಲಿಯ ಮುಂದೆ ಇಡುತ್ತದೆ. "ಬಿಟ್ಟು ಬಿಡು ನಾನು ಮಗುವಿಗೆ ಹಾಲುಣಿಸಿ ಬರುತ್ತೇನೆ" ಎಂದು ವಿನಂತಿಸಿಕೊಳ್ಳುತ್ತದೆ. ಆ ಸಾತ್ವಿಕತೆಯ ಮಾತಿಗೆ ಹುಲಿಯು ಒಪ್ಪುತ್ತದೆ. ಸಾತ್ವಿಕತೆಯ ಮುಂದೆ ಬಾಕಿಯವು ಅಂದರೆ ರಾಜಸ ಮತ್ತು ತಾಮಸ ಗುಣಗಳು ಗೌಣವಾಗುತ್ತದೆ. ಹುಲಿಯು ಒಪ್ಪುತ್ತದೆ. ಪುಣ್ಯಕೋಟಿ ತನ್ನ ಕರುವಿನ ಹತ್ತಿರ ಹೋದಾಗ ಆ ಕರುವು "ಪುನಃ ನೀನು ಹುಲಿಯ ಬಾಯಿಗೆ ಬೀಳಲು ಏಕೆ ಹೋಗುತ್ತೀಯ" ಎಂದು ಕೇಳುತ್ತದೆ. ಏಕೆಂದರೆ ಅದು ತಾಮಸದ ಪ್ರತಿನಿಧಿ ಹಾಗೂ Innocent. ಆದರೆ ಆ ಮಾತಿಗೆ ಸಾತ್ವಿಕತೆಯ ಗೋವು ಏನು ಹೇಳುತ್ತದೆಯೋ ನೋಡೋಣ. "ನಿಷ್ಠೆಯಿಂದಲೇ ಪೋಪೆನಲ್ಲಿಗೆ ಕಟ್ಟ ಕಡೆಗಿದು ಖಂಡಿತ" ಎಂದು ಗೋವು ತನ್ನ ಪ್ರಾಮಾಣಿಕತೆಯನ್ನು ಎತ್ತಿಹಿಡಿಯುತ್ತದೆ.


ಅಲ್ಲಿಗೆ ಗೋವು ತನ್ನ ಮಾತು, ಮನಸ್ಸು ಮತ್ತು ಕೆಲಸ ಬೇರೆ ಅಲ್ಲ ಎಂದು ವ್ಯಕ್ತಪಡಿಸಿದಂತಾಯಿತು. ಎಲ್ಲಿ ಮಾತು, ಮನಸ್ಸು ಮತ್ತು ಕೆಲಸ ಒಂದೇ ಆಗುತ್ತದೋ ಅದು ಸಾತ್ವಿಕತೆ. ಅನಂತರ ಹಸುವು ಗುಹೆಯ ಹತ್ತಿರ ಪುನಃ ಹೋಗುತ್ತದೆ. ಹುಲಿಯನ್ನು ವಿನಂತಿಸುತ್ತ "ಖಂಡವಿದೆಕೊ, ಮಾಂಸವಿದೆಕೊ..." ನನ್ನನ್ನು ನೀನು ತಿಂದು ಸಂತೋಷದಿಂದಿರು ಎಂದು ಹುಲಿಗೆ ಹೇಳುತ್ತದೆ. ಹೀಗೆ ಹೋಗುವಾಗ ತನ್ನ ಮಾತಿಗೆ ತಾನು ತಪ್ಪಬಾರದು ಎನ್ನುವುದು ಹಸುವಿಗೆ ಮುಖ್ಯವಾಗಿರುತ್ತದೆ. ಇದು ಸಾತ್ವಿಕತೆಯ ಪರಾಕಾಷ್ಠತೆ. ಹಸುವಿನ ಸಾತ್ವಿಕತೆಯ ಬುದ್ಧಿಯನ್ನು ಕಂಡು ಹುಲಿಯು ತನ್ನನ್ನು ತಾನು ಒರೆಹಚ್ಚಿ ನೋಡಿಕೊಳ್ಳುತ್ತದೆ. ತಾನೆಂತಹ ತಪ್ಪು ಮಾಡಿದೆ ಎಂದು ತಾನೇ ಸತ್ತು ಹೋಗುತ್ತದೆ. ರೌದ್ರ ಸಾತ್ವಿಕತೆಯ ಮುಂದೆ ಸತ್ತು ಹೋಗುತ್ತದೆ.

ಸಾತ್ವಿಕತೆಯ ಮುಂದೆ ಬಾಕಿಯೆಲ್ಲವೂ ಮಣಿಯುತ್ತದೆ ಎಂದು ನೋಡುವಾಗ ರಾಮ ಸಾತ್ವಿಕ, ರಾವಣ ರೌದ್ರ, ಕೃಷ್ಣ ಚಿಕ್ಕ ಹುಡುಗನಾಗಿದ್ದರೂ ಸಾತ್ವಿಕ, ಕಂಸ ದೊಡ್ಡವನಾಗಿದ್ದಾನೆ ಆದರೆ ರೌದ್ರವನ್ನು ಹೊಂದಿದ್ದಾನೆ. ಗಾಂಧೀಜಿ ಸಾತ್ವಿಕತೆಯ ಪ್ರತೀಕ. ಅಹಿಂಸೆ ಗೆಲ್ಲುತ್ತದೆ ಎಂದರು. ಸತ್ಯ ಮತ್ತು ಅಹಿಂಸೆಗಳೆರಡನ್ನು ತನ್ನ ಅಸ್ತ್ರವನ್ನಾಗಿ ಬಳಸಿಕೊಂಡರು. ಸುಭಾಷ್‌ಚಂದ್ರರು ಯುದ್ಧ ಬೇಕು ಎನ್ನುವ ವಿಚಾರವನ್ನು ಪ್ರಸ್ತಾಪಿಸಿದಾಗ ಗಾಂಧೀಜಿಯವರು ಅದನ್ನು ಒಪ್ಪುವುದಿಲ್ಲ. ಅವರದು ಸತ್ಯ ಮತ್ತು ಅಹಿಂಸೆಯ ಮಾರ್ಗವಾಗಿತ್ತು. ಈಗಿನ ಪರಿಸ್ಥಿತಿಯಲ್ಲಿ ಸಾತ್ವಿಕತೆಗೆ ಅವಕಾಶಗಳು ಕಡಿಮೆ. ಆದರೆ ಅದು ಹಾಗಾಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ವಿಶ್ವ ಚೈತನ್ಯ ಸಾತ್ವಿಕತೆಯನ್ನು ನೆಲೆಯಾಗುವಂತೆ ನೋಡಿಕೊಳ್ಳುತ್ತದೆ. ಸುಭಾಶ್‌ಚಂದ್ರ ಬೋಸರ ದೇಶಭಕ್ತಿಯು ದೊಡ್ಡದೆ. ಆದರೆ ಅವರ ಚಿಂತನೆಯಲ್ಲಿ ರಾಜಸವಿದೆ. ಗೋವು ಪ್ರಾಣಿಯಾಗಿ ಏನು ಮಾಡಿತ್ತೊ, ಗಾಂಧೀಜಿಯವರು ಅದನ್ನೇ ಮಾಡಿದರು.

ಹುಲಿ ರಾಕ್ಷಸ ಪ್ರವೃತ್ತಿ ಇದು ಬ್ರಿಟೀಷರು ಇದ್ದ ಹಾಗೆ. ಹುಲಿ ಬ್ರಿಟಿಷರ ರಾಜಸ ಪ್ರವೃತ್ತಿಯನ್ನು ತೋರಿಸುತ್ತದೆ. ಬ್ರಿಟಿಷ್ ರಾಣಿಯು ಗಾಂಧೀಜಿಯವರು ಬೆಳಗಿನ ಜಾವ 5-00 ಗಂಟೆಗೆ ಥೇಮ್ಸ್ ನದಿಯಲ್ಲಿ ಸ್ನಾನ ಮಾಡಿದ್ದನ್ನು ನೋಡಿ ದಂಗಾದರು ಹಾಗೂ ಗಾಂಧೀಜಿಯವರ ಸರಳತೆ ಹಾಗೂ ಸಾತ್ವಿಕತೆಯನ್ನು ಮೆಚ್ಚಿದ್ದರು. ಅಂದರೆ ಹುಲಿ ಮಣಿದಂತೆ ಇಲ್ಲಿ ಅವರ ಪರಿಸ್ಥಿತಿ. ಇದು ಸಾತ್ವಿಕತೆಯ ಮಹತ್ವ. ರಾಜಸ ಇದ್ದವರು ಸಹ ಯೋಚನೆ ಮಾಡುವುದು ಇದೆ. ಹಾಗಾಗಿ ರಾಜಸವನ್ನು ಪರಿವರ್ತನೆ ಮಾಡುವುದಕ್ಕೆ ಸಾಧ್ಯತೆ ಇದೆ. ತಾಮಸದಲ್ಲಿ ಯೋಚನೆ ಶಕ್ತಿ ಇರುವುದಿಲ್ಲ. ಹಾಗಾಗಿ ತಾಮಸವನ್ನು ಹಾಗೆಯೇ ಒಪ್ಪಿಕೊಳ್ಳಬೇಕಾಗುತ್ತದೆ. ಅಲ್ಲಿ ನಮ್ಮ ಪ್ರಜ್ಞಾಪೂರ್ವಕವಾಗಿ ಅದನ್ನ ಕ್ಷಮಿಸುವಂತಹ, ಅದನ್ನ ಒಪ್ಪಿಕೊಳ್ಳಬೇಕಾದಂತಹ ಸ್ಥಿತಿ ಇರುತ್ತದೆ.

ಸಾತ್ವಿಕ, ತಾಮಸ ಮತ್ತು ರಾಜಸ ಇವುಗಳಲ್ಲಿ ಸಾತ್ವಿಕತೆಯ ಪರಾಕಾಷ್ಠತೆ, ತಾಮಸದ ಮುಗ್ಧತೆ ಮತ್ತು ರಾಜಸದ ಪರಿವರ್ತನಾ ರೀತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕವಾಗುತ್ತದೆ. ಗೋವಿನ ಹಾಡು ಈ ಮೂರರ ಮಧ್ಯದ ಸಂಬಂಧವನ್ನು ಪರಿಚಯಿಸುತ್ತದೆ. ಹಾಗಾಗಿ ಸಾತ್ವಿಕದ ಮಹತ್ವವನ್ನು, ರಾಜಸದ ಪರಿವರ್ತನೆಯ ಸಾಧ್ಯತೆಯನ್ನು, ತಾಮಸವನ್ನು ಒಪ್ಪಿಕೊಳ್ಳಬೇಕಾದ ಸ್ಥಿತಿಯನ್ನು ಸೂಚ್ಯವಾಗಿ ತಿಳಿಸುತ್ತದೆ. **('ಸಮುದ್ಯತಾ ಪ್ರಕಾಶನ', ಬೆಂಗಳೂರು ಇವರು ಪ್ರಕಟಿಸಿದ 'ಪುಣ್ಯಕೋಟಿ ಗೋವಿನ ಹಾಡು' ಪುಸ್ತಕದಿಂದ ಉದ್ಧೃತ)**


ಪತ್ರಿಕೆಗೆ ಶುಭ ಬಯಸುವ–




**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

**ಹೆಬ್ಬಾರ್ ಎಂಟರ್‌ಪ್ರೈಸಸ್**
**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101**

*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*

ಫೋನ್ : 2531493 (O), 2530851 (R), ಮೊಬೈಲ್ : 9448437893

ಪತ್ರಿಕೆಗೆ ಶುಭ ಬಯಸುವ–



**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಸುರತ್ಕಲ್, ಮಂಗಳೂರು**

Prop. : ***Kishore Kumar Kedige***

Ph. : 2231524
M. : 9880726325




**KYADIGE AUTOMOBILES**
**Opp. to D. P. Stores Main Road, B. C. Road, Bantwal Tq.**

***Dealers in : 2 & 3 WHEELERS SPARES***











**ವೈಷ್ಣವಿ ರಾವ್ ಕೆ.**
*4ನೇ ತರಗತಿ*
*D/o. ಆನಂದ ರಾವ್ ಕೆ.*
*ಅಲ್ಲಿಪಾದೆ, ಬಂಟ್ವಾಳ*



**ಅನಘಾ ರಾವ್**
*5ನೇ ತರಗತಿ*



**ಅನನ್ಯಾ ರಾವ್**
*1ನೇ ತರಗತಿ*


ಜ್ಞಾನಶಕ್ತಿ 'ಚಿಣ್ಣರ ಆರ್ಟ್ ಗ್ಯಾಲರಿ'ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ.

**ನಮ್ಮ ವಿಳಾಸ :**
**ಅಂಚೆ ಪೆಟ್ಟಿಗೆ ನಂ. 206**
**ದರ್ಬೆ - 574 202, ಪುತ್ತೂರು, ದ. ಕ.**

**ಚಿತ್ರ 1**



**ಚಿತ್ರ 2**



**ಈ ಮೇಲಿನ ಎರಡು ಚಿತ್ರಗಳಲ್ಲಿರುವ 10 ವ್ಯತ್ಯಾಸಗಳನ್ನು ಗುರುತಿಸಿ.**

# ಶ್ರೀರಂಗಂ, ರಾಮೇಶ್ವರ ಮತ್ತು ಕುಂಭಕೋಣಂ ಪ್ರವಾಸ

*ಶ್ರೀಮತಿ ವೇದಾವತಿ ಜೆ. ಭಟ್, ಮಂಗಳೂರು*



ನಾವು ಮಂಗಳೂರಿನ ISCON ಆಯೋಜಿಸಿದ ಪ್ರವಾಸವನ್ನು ತಾರೀಕು 19–02–2013ರಂದು ಪ್ರಾರಂಭಿಸಿದೆವು. ಈ ತಂಡದಲ್ಲಿ 110 ಮಂದಿ ಸದಸ್ಯರಿದ್ದರು. ಪ್ರತೀ 25 ಜನರಿಗೆ ಒಬ್ಬರು ಟೀಂ ಲೀಡರ್ ಆಗಿ ಆಯೋಜಿಸಿದ್ದರು. ಈ ಸಂಸ್ಥೆಯವರು ಮಂಗಳೂರು ರೈಲ್ವೇ ನಿಲ್ದಾಣದಲ್ಲಿ 9 ಗಂಟೆಗೆ ನಮ್ಮನ್ನೆಲ್ಲಾ ಸೇರಲು ಸೂಚಿಸಿದ್ದರು. ಅಲ್ಲಿ ನಮಗೆ ಪ್ರವಾಸ ಕಾರ್ಯಕ್ರಮದ ವಿವರ, ನಮ್ಮ ರೈಲ್ವೆ ಬೋಗಿ ಸಂಖ್ಯೆ, ಆಸನ ಸಂಖ್ಯೆಗಳನ್ನು ನಮೂದಿಸಿದ ಒಂದು ಚಿಕ್ಕ ಕಾರ್ಡನ್ನು ನೀಡಿದರು. ಅದರಲ್ಲಿ ಪ್ರತಿದಿನದ ಪ್ರವಾಸ ಕಾರ್ಯಕ್ರಮ, ಬೆಳಗ್ಗೆಯಿಂದ ಸಂಜೆವರೆಗೆ ವೀಕ್ಷಿಸುವ ಸ್ಥಳಗಳು, ಸಮಯ ಮತ್ತು ಕೊನೆಗೆ ನಾವು ಉಳಿದುಕೊಳ್ಳುವ ಅತಿಥಿ ಗೃಹದ ವಿವರ ಗಳಿದ್ದವು. ಇದನ್ನು ನಾವು ಕೊನೆಯ ವರೆಗೂ ನಮ್ಮೊಂದಿಗೆ ದಿನಾ ಜತೆಗಿರಿಸಿ ಕೊಂಡುದರಿಂದ ನಮ್ಮ ಪ್ರವಾಸವು ಸಮಯಕ್ಕೆ ಸರಿಯಾಗಿ ಯಾವುದೇ ಆತಂಕವಿಲ್ಲದೆ ನಡೆಯಿತು.

ಮೂರು ದಿನದ ಈ ಪ್ರವಾಸದಲ್ಲಿ ಅವರು ನಿರ್ವಹಿಸಿದ ಅಚ್ಚುಕಟ್ಟುತನ ಮೆಚ್ಚುವಂತಹದ್ದೇ ಆಗಿತ್ತು. ರಾತ್ರಿ 10ಕ್ಕೆ ಹೊರಟ ನಮ್ಮ ರೈಲು ಬೆಳಗ್ಗೆ 11 ಗಂಟೆಗೆ ತಿರುಚಿರಾಪಳ್ಳಿ ತಲುಪಿತು. ಪ್ರತಿದಿನವೂ ಬೆಳಗ್ಗಿನ ಉಪಾಹಾರ ISCONನಿಂದಲೇ ತಯಾರಿಸಿ ತಂದಿದ್ದು ಚಿತ್ರಾನ್ನ, ಸಿಹಿಬಾತ್, ಬಾಳೆಹಣ್ಣುಗಳಿಂದ ಕೂಡಿತ್ತು. ಇದೇ ರೀತಿ 3 ದಿನಗಳೂ ISCONನ ಪ್ರಸಾದವನ್ನು ನಮಗೆ ಕೊಟ್ಟಿದ್ದರು. ಅಲ್ಲಿ ತಲುಪಿದಾಗ ಅಲ್ಲಿನ ISCON ತಂಡದ ಸದಸ್ಯರು ನಮಗೆ ಸ್ವಾಗತಿಸಿ 2 ಬಸ್ಸುಗಳಲ್ಲಿ ಶ್ರೀರಂಗಂ ದೇವಾಲಯದ ಪಕ್ಕದ ವಸತಿಗೃಹಕ್ಕೆ ತಲುಪಿಸಿದರು.


ಮರುದಿನ ಪೂರ್ವಾಹ್ನ ದೇವಾಲಯ ದರ್ಶನಕ್ಕೆ ಹೋದೆವು. ಅಲ್ಲಿನ ದೇವಾಲಯದ ಗೋಪುರಗಳೇ ವಿಶೇಷ ಆಕರ್ಷಣೆ ಗಳಾಗಿದ್ದವು. ಅಲ್ಲಿನ ದೇವರು ಶ್ರೀರಂಗನ ರೂಪವೇ ಮನೋಹರ. ಮುದ್ದಾದ ಮುಖದ ಕೃಷ್ಣ ಅನಂತಶಯನನಾಗಿದ್ದನ್ನು ನೋಡುವಾಗ ನಾವು ಭಾವಲೋಕಕ್ಕೆ ಹೋದೆವು. ಹರೇಕೃಷ್ಣ ಸಂಕೀರ್ತನೆ ಯೊಂದಿಗೆ ಆ ದರ್ಶನ ನಮ್ಮನ್ನು ಕೃಷ್ಣಲೋಕಕ್ಕೆ ಕೊಂಡೊಯ್ಯಿತು.

ಅನಂತರ ಅಲ್ಲಿನ ಇತರ ದೇವರ ಗುಡಿಗಳನ್ನು ಸಂದರ್ಶಿಸಿ ಶ್ರೀ ರಾಮಾನುಜಾ ಚಾರ್ಯರ ಸಮಾಧಿಯನ್ನು ವೀಕ್ಷಿಸಿದೆವು. ನಂತರ ISCONನವರೇ ತಯಾರಿಸಿ ಪ್ರಸಾದ ಭೋಜನವನ್ನು ಸ್ವೀಕರಿಸಿ ಅಲ್ಲಿಂದ ತಿರುಚಿರಾಪಳ್ಳಿಗೆ ಹಿಂದಿರುಗಿದೆವು. ರಾತ್ರಿ 10 ಗಂಟೆಗೆ ರಾಮೇಶ್ವರಂಗೆ ರೈಲಿನಲ್ಲಿ ಪ್ರಯಾಣಿಸಿದೆವು. ನಮ್ಮ ಪ್ರವಾಸದಲ್ಲಿ ಸುಮಾರು 60ಕ್ಕೂ ಹೆಚ್ಚು ವಿದ್ಯಾರ್ಥಿಗಳೇ ಇದ್ದರು. ಅವರ ಉತ್ಸಾಹ, ಕೀರ್ತನೆ, ಕೆಲಸಗಳಲ್ಲಿ– ತನ್ಮಯತೆ ಇವೆಲ್ಲವನ್ನೂ ನೋಡುವಾಗ ನಮ್ಮ ಸಂಸ್ಕೃತಿ ಪರಂಪರೆಯು ಅನಂತವಾಗಿ ಮುಂದುವರಿಯುವುದೆಂಬ ನಂಬುಗೆ ನನಗಾಯಿತು. ಈ ಪ್ರವಾಸ ಒಂದು ಆಧ್ಯಾತ್ಮಿಕ ಪ್ರವಾಸವಾದುದರಿಂದ ಇಲ್ಲಿ ಮೂರು ದಿನಗಳಲ್ಲಿಯೂ ನಮಗೆ ಮನೆ, ಸಂಸಾರಗಳ ನೆನಪೇ ಸುಳಿಯಲಿಲ್ಲ. ರಾಮೇಶ್ವರಕ್ಕೆ ಮರುದಿನ ಬೆಳಗ್ಗೆ 4 ಗಂಟೆಗೆ ತಲುಪಿದಾಗ ಅಲ್ಲಿ ಸಮುದ್ರದ ಅಲೆಗಳ ಭೋರ್ಗರೆತ ನಮ್ಮನ್ನು ಸ್ವಾಗತಿಸಿತು.

ಅಲ್ಲಿ ವಸತಿಗೃಹದಲ್ಲಿ ನಮ್ಮ ಸ್ನಾನ ಮುಗಿಸಿ 6 ಗಂಟೆಗೆ ಸಮುದ್ರ ಸ್ನಾನಕ್ಕೆ ತೆರಳಿದೆವು. ಸಮುದ್ರದಲ್ಲಿ ಮುಳುಗಿ ನಂತರ ಎದುರಿಗಿರುವ ದೇವಾಲಯದಲ್ಲಿ 22 ಕೊಳಗಳ ತೀರ್ಥ ಸ್ನಾನವನ್ನು ಮುಗಿಸಿ ಕೊಂಡು ದೇವರದರ್ಶನಕ್ಕೆ ಸಿದ್ಧರಾದೆವು. ತಮಿಳುನಾಡಿನ ಪ್ರತಿಯೊಂದು ದೇವಸ್ಥಾನ ಗಳು ಭವ್ಯವಾಗಿರುವಂತೆಯೇ ತುಂಬಾ ಶುಚಿಯಾಗಿ ಇದೆ. ಪ್ರವಾಸಿ ಜನಗಳ ಗದ್ದಲ ವಿದ್ದರೂ ಎಲ್ಲಿಯೂ ನೂಕುನುಗ್ಗಲು ಇಲ್ಲದೆ ಶಾಂತತೆಯೊಂದಿಗೆ ದೇವರ ದರ್ಶನ ಮಾಡಬಹುದು. ಅಂತೆಯೆ ತಮಿಳುನಾಡಿನ ರಸ್ತೆಗಳು ತುಂಬಾ ಚೆನ್ನಾಗಿವೆ. ಹಾಗಾಗಿ ಪ್ರವಾಸಗಳು ಪ್ರಯಾಸವಾಗುವುದಿಲ್ಲ.

ರಾಮೇಶ್ವರನ ದರ್ಶನದ ನಂತರ ನಾವು ರಾತ್ರಿ ತಿರುಚಿರಾಪಳ್ಳಿಗೆ ಹಿಂತಿರುಗಿ ವಸತಿ ಗೃಹದಲ್ಲಿ ವಿರಮಿಸಿದೆವು. ಬೆಳಗ್ಗೆ 4–30ಕ್ಕೆ ವಾಹನಗಳಲ್ಲಿ ಕುಂಭಕೋಣಂ ಯಾತ್ರೆ ಪ್ರಾರಂಭಿಸಿದೆವು. ದಾರಿಯಲ್ಲಿ ತಂಜಾವೂರಿನ ಬೃಹದೀಶ್ವರ ದೇವಾಲಯುವನ್ನು ಸಂದರ್ಶಿಸಿದೆವು. ಆ ದೇವಾಲಯ ಹೆಸರೇ ಹೇಳುವಂತೆ ಬೃಹತ್ ಆಗಿದೆ. ಅಲ್ಲಿ ಬೃಹತ್ ಗಾತ್ರದ ಶಿವ ಮತ್ತು ನಂದಿಯ ಮೂರ್ತಿ ಗಳು ವಿಶಾಲ ಅಂಗಣವು ಭವ್ಯವಾಗಿದ್ದು ನೋಡುಗರ ಮನಸೆಳೆಯುವಂತಿದೆ. ನಂತರ ಕುಂಭಕೋಣಂನಲ್ಲಿ ವೆಂಕಟರಮಣನ ದೇವಾಲಯಗಳನ್ನು ಸಂದರ್ಶಿಸಿ ಕೊನೆಗೆ ಮಧ್ಯಾಹ್ನ ಮನ್ನಾರು ಕೃಷ್ಣನ ದೇವಾಲಯಕ್ಕೆ ಬಂದೆವು. ಇಲ್ಲಿಯ ವಿಶಾಲವಾದ ಪುಷ್ಕರಣಿಯ ಸೊಬಗೇ ವಿಶೇಷ. ಅಲ್ಲಿನ ಶ್ರೀಕೃಷ್ಣನ ತೆಪ್ಪೋತ್ಸವ ಪ್ರಸಿದ್ಧವಾದುದು. ಇಲ್ಲಿ ಶ್ರೀಕೃಷ್ಣನು ತನ್ನ ಪರಿವಾರ ಸಮೇತ ನಾಗಿ ನಮಗೆ ದರ್ಶನ ಕೊಡುತ್ತಾನೆ. ಶ್ರೀ ಪುರಂದರ ದಾಸರು ಹಾಡಿದಂತೆ "ಕಂಡೆ ಕಂಡೆ ಕಂಡೆವಯ್ಯ ಕಂಗಳ ದಣಿಯುವ ತನಕ ಮಂಗಳ ಮೂರುತಿ ಮನ್ನಾರು ಕೃಷ್ಣನ...." ಶ್ರೀಕೃಷ್ಣನನ್ನು ಕಣ್ಣಲ್ಲಿ ತುಂಬಿ ಕೊಂಡು ರಾತ್ರಿ ರೈಲಿನಲ್ಲಿ ಮಂಗಳೂರಿಗೆ ಹಿಂತಿರುಗಿದೆವು. ಈ ಪ್ರವಾಸವು ನಮ್ಮೆಲ್ಲರಿಗೂ ಒಂದು ಆಧ್ಯಾತ್ಮಿಕ ಅಲೌಕಿಕ ಲೋಕದಲ್ಲಿ ವಿಹರಿಸುವಂತೆ ಮಾಡಿತ್ತು.

The RIGHT Place for the Customer
**RAJESH POWER PRESS**
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTER**

*Dealers in : Computers Hardware and Peripherals*
*Computer Sales & Services*
*Alvares Centre, N.H. 17, Nanthoor, Mangalore - 575 005*

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**


**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

**ರಾಮಾ ಅಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

# ಬಳ್ಪದಲ್ಲಿ ಶೃಂಗೇರಿ ಜಗದ್ಗುರು ಶ್ರೀ ಭಾರತೀತೀರ್ಥ ಸಭಾಭವನ ಲೋಕಾರ್ಪಣೆ




**ಸುಬ್ರಹ್ಮಣ್ಯ :** ಶೃಂಗೇರಿ ಮಠದ ಜಗದ್ಗುರು ಶ್ರೀ ಭಾರತೀತೀರ್ಥ ಸ್ವಾಮೀಜಿಗಳು ಗುರುವಾರ ಬಳ್ಪಕ್ಕೆ ಆಗಮಿಸಿ ಅಲ್ಲಿ ವಾಸ್ತವ್ಯ ಹೂಡಿ, ಶುಕ್ರವಾರ ದರುಶನ ಮತ್ತು ಫಲ ಮಂತ್ರಾಕ್ಷತೆ ನೀಡಿ ಭಕ್ತರನ್ನು ಹರಸಿದರು.

ಬಳ್ಪದ ತ್ರಿಶೂಲಿನಿ ದುರ್ಗಾಪರಮೇಶ್ವರೀ ದೇವಾಲಯಕ್ಕೆ ಗುರುವಾರ ಆಗಮಿಸಿದ ಶೃಂಗೇರಿ ಮಠದ ಶ್ರೀ ಭಾರತೀತೀರ್ಥ ಸ್ವಾಮೀಜಿಯವರನ್ನು ಪೂರ್ಣಕುಂಭಗಳೊಂದಿಗೆ ವೈಭವದಿಂದ ಸ್ವಾಗತಿಸಲಾಯಿತು. ಬ್ಯಾಂಡ್‌ವಾದನಗಳ ಸಮ್ಮಿಳನದಿಂದ ಭವ್ಯ ಮೆರವಣಿಗೆಯಲ್ಲಿ ಶ್ರೀಗಳನ್ನು ದೇವಳಕ್ಕೆ ಕರೆದೊಯ್ಯಲಾಯಿತು. ಆ ಬಳಿಕ ಶ್ರೀಗಳು ತ್ರಿಶೂಲಿನಿ ದೇವಳಕ್ಕೆ ಭೇಟಿ ನೀಡಿ ನೂತನ ಸಭಾಭವನವನ್ನು ಲೋಕಾರ್ಪಣೆಗೊಳಿಸಿದರು. ಅಲ್ಲದೆ ಧೂಳಿ ಪಾದಪೂಜೆ ನೆರವೇರಿಸಿದರು.

ಶ್ರೀಗಳು ವಿಶೇಷ ಶಾರದಾ, ಚಂದ್ರಮೌಳೀಶ್ವರ ಪೂಜೆಯನ್ನು ನೆರವೇರಿಸಿದರು. ಬಳಿಕ ಶ್ರೀ ದುರ್ಗಾಪರಮೇಶ್ವರೀ ದೇವರಿಗೆ ವಿಶೇಷ ಪೂಜೆ, ಅರ್ಚನೆ ಮತ್ತು ಮಹಾಮಂಗಳಾರತಿಯನ್ನು ನೆರವೇರಿಸಿದರು.

ಶುಕ್ರವಾರ ಬೆಳಗ್ಗೆ ಊರ ಭಕ್ತರಿಂದ ಶ್ರೀ ಗುರುಗಳ ದರ್ಶನ, ಪಾದಪೂಜೆ ಭಿಕ್ಷಾವಂದನೆ, ಫಲಪುಷ್ಪ ಸಮರ್ಪಣೆ ನೆರವೇರಿತು. ಶ್ರೀಕ್ಷೇತ್ರದ ತಂತ್ರಿಗಳಾದ ಪಾವಂಜೆ ವಾಗೀಶ ಶಾಸ್ತ್ರಿಗಳಿಂದ ಪ್ರಸ್ತಾವನೆಯ ನಂತರ ಶ್ರೀಗಳು ಅನುಗ್ರಹ ಸಂದೇಶ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಎಂ. ವಿ. ಶ್ರೀವತ್ಸ, ಸ್ವಾಗತ ಸಮಿತಿ ಅಧ್ಯಕ್ಷ ಸದಾನಂದ ರೈ ಅರ್ಗುಡಿ, ಗೌರವಾಧ್ಯಕ್ಷ ಎಂ.ಆರ್. ವಾಸುದೇವ, ಕಾರ್ಯಾಧ್ಯಕ್ಷ ಲಿಂಗಪ್ಪ ಗೌಡ ಕಟ್ಟ, ಸಂಚಾಲಕ ಕರುಣ್ ರಾವ್ ಬೆಳ್ಳೆ, ಪ್ರಧಾನ ಕಾರ್ಯದರ್ಶಿ ವಿಶ್ವನಾಥ ರೈ ಅರ್ಗುಡಿ ಸೇರಿದಂತೆ ಭಕ್ತಾದಿಗಳು ಉಪಸ್ಥಿತರಿದ್ದರು.


Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028



PREETHIKA AUTOMOBILES
2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils



Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)




## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಮಂಗಳೂರಿನ ಶ್ರೀಮತಿ ಉಷಾ ಮತ್ತು ಶ್ರೀ ಎಂ.ಕೆ. ಪ್ರಭಾಕರ ರಾವ್‌ರವರ ಪುತ್ರ **ಭರತ್ ರಾವ್** ಹಾಗೂ ಶ್ರೀಮತಿ ಜಯಂತಿ ಮತ್ತು ಶ್ರೀ ಎಚ್. ಎಸ್. ದ್ವಾರಕನಾಥ್‌ರವರ ಪುತ್ರಿ **ಅನನ್ಯ**ರವರ ವಿವಾಹವು ತಾ. 17-02-2014ರಂದು ಮೈಸೂರಿನ ಶ್ರೀ ಮಹಾವೀರ ಭವನದಲ್ಲಿ ನೆರವೇರಿತು. ವಧೂವರರ ಗೃಹಪ್ರವೇಶ ಕಾರ್ಯಕ್ರಮ ತಾ. 18-02-2014ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆಯಿತು.

*****

ಮಂಗಳೂರಿನ ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ನಾಗೇಶ್ ರಾವ್‌ರವರ ಸುಪುತ್ರ **ಕೆ. ಪ್ರಸಾದ್ ರಾವ್** ಹಾಗೂ ಶ್ರೀಮತಿ ಸರಸ್ವತಿ ಮತ್ತು ಶ್ರೀ ಅಶೋಕ್ ಕುಮಾರ್ ಮಟ್ಟು ಇವರ ಪುತ್ರಿ **ಶೃತಿ ಎ. ರಾವ್**‌ರವರ ವಿವಾಹವು ತಾ. 09-03-2014ರಂದು ಉಡುಪಿ, ಚಿಟ್ಪಾಡಿ ಶ್ರೀ ಶಾರದಾಂಬ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಭವತಿ ಭಿಕ್ಷಾಂದೇಹಿ...



ಶ್ರೀಮತಿ ಚೈತ್ರಾ ಮತ್ತು ಶ್ರೀ ಸತೀಶ್ ರಾವ್‌ರವರ ಪುತ್ರ **ಚಿ. ಸಂಜಯ**ನ ಬ್ರಹ್ಮೋಪದೇಶ ಕಾರ್ಯಕ್ರಮವು ತಾ. 21-02-2014ರ ಶುಕ್ರವಾರ ದಂದು ಹಿರಿಯಡ್ಕದ 'ಶ್ರೀ ದುರ್ಗಾ ಕಲ್ಯಾಣ ಮಂಟಪ'ದಲ್ಲಿ ಜರುಗಿತು.

*****

ಶ್ರೀಮತಿ ರೇಖಾ ಮತ್ತು ಶ್ರೀ ಪ್ರದೀಪ ಕುಮಾರರವರ ಪುತ್ರ **ಚಿ. ಪ್ರದ್ಯೋತ**ನ ಬ್ರಹ್ಮೋಪದೇಶ ಕಾರ್ಯಕ್ರಮವು ತಾರೀಕು 03-03-2014ನೇ ಸೋಮವಾರದಂದು ನೆಲ್ಲಿಕುಂಜೆಯಲ್ಲಿರುವ 'ಸರಳಾಕೃಪಾ'ದಲ್ಲಿ ಜರುಗಿತು.

# ಶ್ರೀ ಸಭಾದಿಂದ ಬಳ್ಪದಲ್ಲಿ ಪಾದಪೂಜೆ



ತಾರೀಕು 20-02-2014ರಂದು ಬಳಪದ ತ್ರಿಶೂಲಿನಿ ದೇವಸ್ಥಾನಕ್ಕೆ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮಿಗಳು ಆಗಮಿಸಿದಾಗ ಶ್ರೀ ಸಭಾದ ಸದಸ್ಯರು ತೆರಳಿ ಪಾದಪೂಜೆ ನಡೆಸಿ ಕೃತಾರ್ಥರಾದರು. ಶೋಭಾಯಾತ್ರೆಯಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಶ್ರೀಗಳಿಂದ ಮಂತ್ರಾಕ್ಷತೆ ಫಲಪುಷ್ಪಗಳನ್ನು ಪಡೆದು ಧನ್ಯತೆ ಪಡೆದರು. ಪ್ರಸಾದ ಭೋಜನ ವ್ಯವಸ್ಥೆಯಲ್ಲಿ ಸದಸ್ಯರು ಸಹಕರಿಸಿ ಶ್ರೀಗಳು ನಡೆಸಿದ ಚಂದ್ರಮೌಳೀಶ್ವರ ಪೂಜೆ, ಮಂಗಳಾರತಿ ವೀಕ್ಷಿಸಿ ಪುಳಕಿತರಾದರು. ಶ್ರೀ ಸಭಾದ ಪದಾಧಿಕಾರಿಗಳಾದ ಶ್ರೀ ಸಿ.ಎಸ್. ರಾವ್, ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಅನಿಲ್ ರಾವ್ ಬಿ.ಎಸ್., ಶ್ರೀ ಪಿ. ಶ್ರೀಕಾಂತ್ ರಾವ್ ಮತ್ತು ಇತರ ಸದಸ್ಯರು ಭಾಗವಹಿಸಿದ್ದರು.

*ಚಿತ್ರ : ಶ್ರೀ ರಘುವೀರ ಪೆರ್ಡೂರು*


ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮ ನವೀನ್ ಕುಮಾರ್
ಶ್ರೀಮತಿ ರೇಷ್ಮ, ಶ್ರೀ ವಸಂತ್ ಕುಮಾರ್, ಅನೀಶ್ ರಾವ್
ಶ್ರೀಮತಿ ಸುಶ್ಮ, ಶ್ರೀ ಶಿವಾನಂದ ರಾವ್ ಹಾಗೂ ಅಂಜನ್ ರಾವ್





ಎಲ್ಐಸಿ ಪಾಲಿಸಿಗಳ ಪುನರುಜ್ಜೀವನ (Lapsed Policy Revival) ಕ್ಲೈಮ್, ಸರೆಂಡರ್, ಲೋನ್, ನಾಮಿನೇಶನ್ ಇತ್ಯಾದಿ ಸರ್ವಿಸ್‌ಗಳನ್ನು ನೀಡಲಾಗುವುದು ಹಾಗೂ ಇಚ್ಛೆಪಟ್ಟಲ್ಲಿ ಅವರಿಗೆ ಹೊಂದಿಕೆಯಾಗುವಂತಹ ಹೊಸ ಪಾಲಿಸಿಗಳನ್ನು ಮಾಡಿಕೊಡಲಾಗುವುದು. ಅಲ್ಲದೆ ಮೋಟರ್ ವೆಹಿಕಲ್ ಇನ್ಶೂರೆನ್ಸ್, ಹೆಲ್ತ್ ಇನ್ಶೂರೆನ್ಸ್, ಪಾನ್ ಕಾರ್ಡ್ ಹಾಗೂ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿರಿ :
LIC
ಪಿ. ರಾಜೇಂದ್ರ ರಾವ್, ಬಿ.ಎಸ್ಸಿ.
ಕುಂಜತ್ತಬೈಲ್, ಮಂಗಳೂರು, ಮೊಬೈಲ್ : 9242214842

# ಪಡುಬಿದ್ರಿಯ ಸ್ಥಾನಿಕ ಬ್ರಾಹ್ಮಣ ಸಂಘ ನಡೆಸಿದ ಪ್ರವಾಸದ ಸವಿನೆನಪುಗಳು



ನಮ್ಮ ಸಂಘ ಪ್ರತಿ ವರ್ಷದಂತೆ ಈ ಬಾರಿಯೂ 19–01–2014ನೇ ರವಿವಾರ ಒಂದು ದಿನದ ಪ್ರವಾಸವನ್ನು ನಡೆಸುವುದೆಂದು ನಿರ್ಧರಿಸಲಾಯಿತು. ನಮ್ಮ ಸದಸ್ಯರೆಲ್ಲರ ಅಭಿಪ್ರಾಯದಂತೆ ನಮ್ಮ ಸಮಾಜದ ಆಡಳಿತಕ್ಕೆ ಒಳಪಟ್ಟ ಬಳ್ಪ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಹಾಗೂ ಶ್ರೀ ತ್ರಿಶೂಲಿನಿ ದೇವಸ್ಥಾನಗಳನ್ನು ಸಂದರ್ಶಿಸುವುದೆಂದು ತೀರ್ಮಾನಿಸಿದ್ದೆವು.

ಪ್ರವಾಸದ ಸಂಪೂರ್ಣ ಸಂತಸವನ್ನು ಎಲ್ಲರೂ ಒಟ್ಟಿಗೇ ಸವಿಯುವ ಉದ್ದೇಶದಿಂದ ಸುಮಾರು 90 ಜನರನ್ನು ಒಳಗೊಂಡು ಒಂದೇ ಬಸ್ಸಿನಲ್ಲಿ ಸಂಘದ ಕಾರ್ಯಾಲಯ ಪಡುಬಿದ್ರಿಯ ನಂದಗೋಕುಲದಿಂದ ಬೆಳಗ್ಗೆ 8 ಗಂಟೆಗೆ ಹೊರಟೆವು. ಬಸ್ಸಿನಲ್ಲಿ ಎದುರುಗಡೆ ಹಾಗೂ ಹಿಂಬದಿಯಲ್ಲಿ ಎರಡು ಧ್ವನಿವರ್ಧಕಗಳನ್ನು ಅಳವಡಿಸಿ, ಪ್ರತಿಯೊಬ್ಬರ ಮಾತುಗಳು ಎಲ್ಲರಿಗೂ ಕೇಳಿಸುವ ಏರ್ಪಾಡಾಗಿತ್ತು.

ಶ್ರೀಯುತ ಎಂ.ಕೆ. ದಿವಾಕರ ರಾವ್‌ರವರ ಪ್ರಾರ್ಥನೆ ಯೊಂದಿಗೆ ನಮ್ಮ ಪ್ರವಾಸ ಆರಂಭವಾಯಿತು. ಬಳಿಕ ಶ್ರೀಯುತ ಸುಧಾಕರ ಬೆಳ್ಳೆಯವರು ಅಂದಿನ ಕಾರ್ಯಕ್ರಮದ ಬಗ್ಗೆ ವಿವರ ನೀಡಿದರೆ ಶ್ರೀ ದಿವಾಕರರಾಯರು ಪ್ರವಾಸದ ಪ್ರತಿಕ್ಷಣವೂ ನಮಗೆ ಅವಿಸ್ಮರಣೀಯವಾಗಿರಬೇಕು, ಅದನ್ನು ನಾವು ಹೇಗೆ ಬಳಸಬೇಕೆಂಬ ಬಗ್ಗೆ ಉತ್ತಮ ಮಾಹಿತಿ ಯನ್ನಿತ್ತರು. ಬೆಳಗ್ಗಿನ ಉಪಾಹಾರವನ್ನು ಉಪ್ಪಿನಂಗಡಿಯಲ್ಲಿ ವಾಸ್ತವ್ಯವಿರುವ ಅಡೂರು ಜನಾರ್ಧನ ರಾವ್ ದಂಪತಿಗಳು ಹಾಗೂ ನಂದಿಕೂರಿನ ಶ್ರೀ ದಿನಕರ ರಾವ್ ದಂಪತಿಗಳು ಆಯೋಜಿಸಿದ್ದರು. ಅದಕ್ಕೂ ಮೊದಲೇ ಬಸ್ಸಿನಲ್ಲಿ ಲಘು ಉಪಾಹಾರಕ್ಕೆಂದು ತಂದ ಬಿಸಿಬಿಸಿ ಬನ್ಸನ್ನು ಹಂಚಿಕೊಂಡು ತಿಂದೆವು. ಮುಂದೆ ಹಿರಿಯರು ಕಿರಿಯರೆನ್ನದೆ ಹಾಡುತ್ತಾ, ನಲಿಯುತ್ತಾ, ಅಂತಾಕ್ಷರಿಯಾಡುತ್ತಾ ಉಪ್ಪಿನಂಗಡಿ ತಲುಪಿದೆವು. ಅಲ್ಲಿ ದಿನಕರ ರಾವ್ ದಂಪತಿಗಳು ಇಡ್ಲಿ, ಸಾಂಬಾರ್, ಕ್ಷೀರ, ವಡೆಗಳಿಂದ ಕೂಡಿದ ರುಚಿಕಟ್ಟಾದ ಉಪಾಹಾರವನ್ನು ನೀಡಿ ನಮ್ಮನ್ನು ಆತ್ಮೀಯವಾಗಿ ಉಪಚರಿಸಿದರು. ಅವರಿಗೆ ಕೃತಜ್ಞತೆಗಳನ್ನು ತಿಳಿಸಿ ನಮ್ಮ ಪ್ರವಾಸವನ್ನು ಮುಂದುವರಿಸಿದೆವು.

ಅಪರಾಹ್ನ ಸುಮಾರು 12–30ರ ಹೊತ್ತಿಗೆ ಬಳ್ಪ ದೇವಳವನ್ನು ತಲುಪಿದೆವು. ಅಲ್ಲಿಯ ಸಮಾಜ ಬಾಂಧವರು ಹಾಗೂ ದೇವಳದ ಆನುವಂಶಿಕ ಮೊಕ್ತೇಸರರಾದ ಬಳ್ಪ ಮೊರಾಜೆ ಮನೆತನದ ಶ್ರೀಯುತ ಶ್ರೀವತ್ಸ ರಾವ್ ದಂಪತಿಗಳು ಆದರದಿಂದ ಸ್ವಾಗತಿಸಿ, ಎರಡೂ ದೇವಳಗಳ ಇತಿಹಾಸದ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ನಮ್ಮ ಸಂಘದ ಸದಸ್ಯ–ಸದಸ್ಯೆಯರು ಸೇರಿ ಸುಮಾರು ಅರ್ಧ ತಾಸು ಭಕ್ತಿಗೀತೆಗಳನ್ನು ಹಾಡಿ ಕೃತಾರ್ಥರಾದೆವು. ಶ್ರೀ ಮಾತೆಯ ಮಧ್ಯಾಹ್ನದ ಮಂಗಳಾರತಿಯಲ್ಲಿ ಪಾಲ್ಗೊಳ್ಳುವ ಭಾಗ್ಯ ನಮಗೆ ದೊರೆತುದು ಬಹಳ ಸಂತಸದ ಸಂಗತಿ. ದೇವಸ್ಥಾನದ ಆಡಳಿತ ಮಂಡಳಿಯವರು ನಮಗಾಗಿ ಅತ್ಯುತ್ತಮ ಭೋಜನದ ಏರ್ಪಾಡು ಮಾಡಿದು ದಲ್ಲದೆ, ಅಂದು ಸಂಕಷ್ಟಿ ಇದ್ದು, ಉಪವಾಸ ವ್ರತ ಹಿಡಿದಿದ್ದ ಸದಸ್ಯರಿಗೆಲ್ಲಾ ಉಪಾಹಾರದ ವ್ಯವಸ್ಥೆ ಮಾಡಿದ್ದು ಬಹಳ ವಿಶೇಷವಾಗಿತ್ತು. ಆದರೆ ಪಟ್ಟಣದಿಂದ ಬಹಳ ದೂರದ, ವಾಹನ ವ್ಯವಸ್ಥೆ ಇಲ್ಲದ ಆ ಹಳ್ಳಿಯಲ್ಲೂ ನಮಗೆ ಇಷ್ಟೆಲ್ಲಾ ವ್ಯವಸ್ಥೆ ಮಾಡಲು ಕಾರಣಕರ್ತರಾದ ಶ್ರೀಯುತ ಕರುಣ್ ರಾವ್ ಬೆಳ್ಳೆಯವರ ದರ್ಶನಭಾಗ್ಯ ಆ ದಿನ ಬಳ್ಪದಲ್ಲಿ ದೊರೆಯದೆ ಇದ್ದು, ಏನೋ ಕಳಕೊಂಡ ಭಾವನೆ ನಮ್ಮಲ್ಲಿ ಮೂಡಿತ್ತು. ಹಸಿದ ಹೊಟ್ಟೆ ತಣಿಸಿದ ಅವರಿಗೆ ಮನದಲ್ಲೇ ಕೃತಜ್ಞತೆ ಸಲ್ಲಿಸಿ ಹಿಂದಿರುಗಿದೆವು. ಹೊಟ್ಟೆ ತುಂಬಿದ ಯಾರನ್ನೂ ತೂಕಡಿಸಲು ಬಿಡದೆ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ, ಹಾಡುತ್ತಾ, ಪರಸ್ಪರ ಕೀಟಲೆ ಮಾಡುತ್ತಾ, ಕಲ್ಲಡ್ಕದಲ್ಲಿ ಸಂಜೆ ಉಪಾಹಾರವನ್ನು ಸೇವಿಸಿ, ಪಣಂಬೂರಿನ ಸಮುದ್ರ ಕಿನಾರೆಗೆ ಬಂದೆವು. ಅಲ್ಲಿ ಮಕ್ಕಳು ಮನತಣಿಯುವಷ್ಟು ಆಟವಾಡಿದರು. ಕತ್ತಲು ಏರತೊಡಗಿದುದರಿಂದ ಅನಿವಾರ್ಯವಾಗಿ ಬಸ್ಸಿನಲ್ಲಿ ಊರಿಗೆ ಮರಳಿದೆವು. ಊರು ತಲುಪುವಾಗ ಮುಂದೆ ಈ ಅವಕಾಶಕ್ಕಾಗಿ ಇನ್ನೂ ಒಂದು ವರುಷ ಕಾಯಬೇಕಲ್ಲ ಎಂಬ ಬೇಸರ ಎಲ್ಲರ ಮನದಲ್ಲೂ ಮೂಡಿತು. ಅದರಲ್ಲೂ ನನ್ನ ಪಕ್ಕದಲ್ಲಿ ಕುಳಿತ ನನ್ನಂತಹ ನಡುವಯಸ್ಸಿನ ಸದಸ್ಯೆಯರು 'ಇವತ್ತು ಮಧ್ಯಾಹ್ನ ನಾವು ಮಲಗಲೇ ಇಲ್ಲ. ನಮಗೆ ನಿದ್ದೆಯೇ ಬರಲಿಲ್ಲ' ಎಂದು ಉದ್ಗರಿಸಿದಾಗ ನನಗೂ ನನ್ನ ಬಗ್ಗೆ ಅಚ್ಚರಿ ಎನಿಸಿತು.

*ವರದಿ : **ಸೀತಾದೇವಿ ಭಾಸ್ಕರ ರಾವ್***
*ನಿರ್ದೇಶಕರು, ಸ್ಥಾನಿಕ ಬ್ರಾಹ್ಮಣ, ಸಭಾ (ರಿ.), ಪಡುಬಿದ್ರಿ*

# ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವ

ನಮ್ಮ ಸಂಘದ ವಾರ್ಷಿಕೋತ್ಸವವು ಶ್ರೀ ಅನಂತ ಪದ್ಮನಾಭ ಸಭಾಗೃಹದಲ್ಲಿ ದಿ. ಮರವಂತೆ ರಮಾನಂದ ಶ್ಯಾನುಭೋಗ್‌ರವರ ವೇದಿಕೆಯಲ್ಲಿ ವೇದಮೂರ್ತಿ ಶ್ರೀ ಚಿದಾನಂದ ಶ್ಯಾನುಭೋಗರ ವೇದಘೋಷಣೆ ಯೊಂದಿಗೆ ಶ್ರೀ ಸೂರ್ಯನಾರಾಯಣ ಐತಾಳರು ಸಭೆಯನ್ನು ಉದ್ಘಾಟಿಸಿದರು ಹಾಗೂ ಶ್ರೀಮತಿ ಶಾಂತಾ ಗಣೇಶ್ ಇವರು ನಮ್ಮ ಸಂಘಕ್ಕೆ ನೀಡಿದ ಸ್ಮರಣಿಕೆಯನ್ನು ಬಿಡುಗಡೆಗೊಳಿಸಿದರು. ನಂತರ ಮಕ್ಕಳಿಗೆ, ಮಹಿಳೆಯರಿಗೆ, ಪುರುಷರಿಗೆ ಆಟೋಟ ಸ್ಪರ್ಧೆ ನಡೆಸಲಾಯಿತು.

**ಪ್ರಧಾನ ಕಾರ್ಯಕ್ರಮ :** ಸಂಘದ ಪ್ರಧಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶ್ಯಾಮಪ್ರಸಾದ್ ಶ್ಯಾನುಭೋಗ್, ಹಿರಿಯ ಪ್ರಬಂಧಕರು, ಕಾರ್ಪೋರೇಶನ್ ಬ್ಯಾಂಕ್, ಮಂಗಳೂರು ಇವರು ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಅಭಿವೃದ್ಧಿ ಹೊಂದಲು ಮಾಹಿತಿ ನೀಡಿ ಸಂಘಕ್ಕೆ ಶುಭಹಾರೈಸಿದರು. ಇನ್ನೋರ್ವ ಅತಿಥಿಯಾದ ಎಂ. ದೇವಾನಂದ ಭಟ್ ಬೆಳುವಾಯಿ ಅಧ್ಯಕ್ಷರು, ಆದಿಶಂಕರ ಬ್ರಾಹ್ಮಣ ಪರಿಷತ್ತು ಮೂಡುಬಿದಿರೆ ಇವರು ಸಂಘದ ಏಳಿಗೆಗಾಗಿ ಸಲಹೆ–ಸೂಚನೆಗಳನ್ನು ನೀಡಿ ಶುಭಹಾರೈಸಿ ದರು. ಆಟೋಟ ಸ್ಪರ್ಧೆಗೆ ದೇಣಿಗೆ ನೀಡಿದ ಚಿದಾನಂದ ರಾವ್ ಅವರ ಪರವಾಗಿ ಅವರ ತಾಯಿಯಾದ ಸರೋಜಿನಿ ವಾಸುದೇವ ರಾವ್ ವಿಜೇತರಿಗೆ ಬಹುಮಾನ ನೀಡಿದರು. ಸಮಾಜದ ಬಡ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನವನ್ನು ಇಂದಿನ ಪ್ರಯೋಜಕರ ಕುಟುಂಬದ ಹಿರಿಯರಾದ ಶ್ರೀಮತಿ ಲಕ್ಷ್ಮೀ ವಾಸುದೇವ ರಾವ್ ಹಾಗೂ ಸಂಘದ ಖಜಾಂಚಿ ಪ್ರೊ. ಶಂಕರ ರಾವ್ ಕಾಳಾವರ ಧರ್ಮದರ್ಶಿ, ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕಾಳಾವರ ವಿತರಿಸಿ ವಿದ್ಯಾರ್ಥಿಗಳಿಗೆ ಭವಿಷ್ಯದ ಕನಸು ಕಾಣಿ ಎಂದು ಕರೆ ನೀಡಿದರು. ವೇದಿಕೆಯ ಅಧ್ಯಕ್ಷರಾದ ಗಣೇಶ್ ರಾವ್ ಅವರು ಹಿರಿಯರ ಸನ್ಮಾನದ ಬಗ್ಗೆ ಹಾಗೂ ನಮ್ಮ ಸಂಘದ ಮುಂದಿನ ಚಟುವಟಿಕೆ ಬಗ್ಗೆ ವಿವರಿಸಿದರು. ಗೌರವಾಧ್ಯಕ್ಷರಾದ ದಯಾನಂದ ರಾವ್ ಶಂಕರನಾರಾಯಣ, ಮಹಿಳಾ ಅಧ್ಯಕ್ಷೆ ಪಾರ್ವತಿ ಬೈಂದೂರು, ಯುವ ವೇದಿಕೆ ಕಾರ್ಯದರ್ಶಿ ಜಯಪ್ರಕಾಶ್ ಉಳ್ತೂರು ಉಪಸ್ಥಿತರಿದ್ದರು. ಶ್ರೀಯುತ ಸುಬ್ರಹ್ಮಣ್ಯ ಜೋಶಿ ಕಾರಬೈಲ್ ಇವರು ವೇದಿಕೆಯಲ್ಲಿದ್ದ ಎಲ್ಲರನ್ನೂ ಸ್ವಾಗತಿಸಿ ಪರಿಚಯಿಸಿದರು. ಕಾರ್ಯದರ್ಶಿ ಜಯರಾಮ್ ಶ್ಯಾನುಭೋಗ್‌ರವರು ಧನ್ಯವಾದಗೈದರು. ಶ್ರೀಮತಿ ಶಾಂತಾಗಣೇಶ್, ಶೀತಲ್, ರವೀಂದ್ರ ದೊಡ್ಮನೆ ಕಾರ್ಯಕ್ರಮ ನಿರ್ವಹಿಸಿದರು.


## ವಧೂವರರ ವಿವಾಹ ವೇದಿಕೆ



**ನಮ್ಮ ಸಮಾಜ ಬಾಂಧವರ ಗಮನಕ್ಕೆ -**

ವಧೂವರರ ವಿವಾಹ ವೇದಿಕೆಯನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಪ್ರಾರಂಭಿಸಿ, ಇದರ ಉಪಯುಕ್ತತೆಯನ್ನು ನಮ್ಮ ಸಮಾಜ ಬಾಂಧವರು ಪಡೆದುಕೊಂಡಿದ್ದಾರೆ. ಇನ್ನು ಮುಂದೆಯೂ ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಬಹುದು.

*ಸಂಪರ್ಕಿಸಿರಿ :*

**ಶ್ರೀ ಚೇತನ್ ಶರ್ಮಾ : 9844187083**
**ಶ್ರೀ ಎನ್. ಶಶಿಕಾಂತ್ ರಾವ್ : 9341988753**
**ಶ್ರೀಮತಿ ವೈಜಯಂತಿ ರಾವ್ ಬೆಳ್ಳೆ : 9242204848**


E-mail : gbicsm@gmail.com



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು


ಸಮಾಜ ಬಾಂಧವರೇ,

ಯಶಸ್ವಿ 3ನೇ ವರುಷದಲ್ಲಿ ಸಾಗುತ್ತಿರುವ 'ಜ್ಞಾನಶಕ್ತಿ' ಮಾಸಪತ್ರಿಕೆಯನ್ನು ಸದಾಕಾಲ ನಿಮಗೆ ನೀಡುವ ಉದ್ದೇಶದಿಂದ ಪತ್ರಿಕೆಗೆ ಈ ಕೆಳಗಿನಂತೆ ಚಂದಾದರವನ್ನು ನಿಗದಿಪಡಿಸಲಾಗಿದೆ.



| | | | |
|---|---|---|---|
| **ಮಹಾ ಪೋಷಕರು** | – | ರೂ. | **10,000/-** |
| **ಪೋಷಕರು** | – | ರೂ. | **5,000/-** |
| **ಆಜೀವ ಚಂದಾ ದರ** | – | ರೂ. | **500/-** |

ಚೆಕ್ ಅಥವಾ ಡಿ.ಡಿ.ಗಳನ್ನು 'ಜ್ಞಾನಶಕ್ತಿ' ಹೆಸರಿನ ಮೂಲಕ ಸುಬ್ರಹ್ಮಣ್ಯ ಸಭಾ, ಕೊಡಿಯಾಲ್‌ಬೈಲ್, ಮಂಗಳೂರು - 575 003ಕ್ಕೆ ಕಳುಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ***ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 09363361618.***




## ಜ್ಞಾನ – ನುಡಿ

ಸ್ವಾರ್ಥದಿಂದ ತುಂಬಿದ ಮನಸ್ಸಿನ ಪ್ರೀತಿಯಿಂದ ಪ್ರಯೋಜನವಿಲ್ಲ. ಕೈಕುಲುಕಬಹುದು, ಆಲಂಗಿಸಿಕೊಳ್ಳಬಹುದು, ಆದರೆ ತಲೆಗೆ ತಲೆ ಡಿಕ್ಕಿ ಹೊಡೆಯಬಾರದು. ಹಾಗಿದ್ದರೆ ಮಾತ್ರ ಏಕತೆ ಎನ್ನಲು ಸಾಧ್ಯ. ***ಪ್ರೇಮ್‌ಚಂದ್***

## ಜ್ಞಾನ – ಗಾದೆ

ಏಪಲ ಏರೇರ್ನ್ ಸುದ್ದಿ ಪಾತೆರುನಾಯೆ, ನಮನ್ ಬುಡುವೆನಾ?
ಒಂಜಿ ಕಣ್ಣ್‌ಗ್ ಬೊಣ್ಣ್ಯೆ, ನಾನೊಂಜಿ ಕಣ್ಣ್‌ಗ್ ಸುಣ್ಣ
ಒಂಜಪ್ಪೆ ಬಾಲೆಲಾಂಡಲಾ, ಆಲಚನೆ ಏಪರೀತ

## ಜ್ಞಾನ – ನಗೆ

ಗೀತ : ನಾನಂತು ನನ್ನ ಗಂಡನನ್ನು ಬಿಟ್ಟು ಒಂದು ದಿನವೂ ಇರಲ್ಲ.

ಸೀತಾ : ಹೌದಾ... ಹಾಗಾದ್ರೆ ನೀವಿಬ್ರೂ ತುಂಬಾ ಪ್ರೀತಿಯಿಂದ ಇದೀರಾ ಅನ್ಸುತ್ತೆ.

ಗೀತ : ಹಾಗೇನಿಲ್ಲ... ಅವರು ಒಂದು ದಿನ ಇಲ್ಲವೆಂದರೆ ಮನೆಗೆಲಸ ಯಾರು ಮಾಡ್ತಾರೆ?

## ಜ್ಞಾನ – ವಿಸ್ಮಯ

ಹತ್ತು ವರ್ಷಗಳಿಗೊಮ್ಮೆ ಮಾತ್ರ ಹುಟ್ಟುಹಬ್ಬ ಆಚರಿಸಿಕೊಳ್ಳುವ ಜನರು ಇರುವ ದೇಶ – **ಚೀನಾ**

ಪ್ರತಿಯೊಬ್ಬರ ಮನೆಯಲ್ಲಿ ಒಂದು ಗಿಟಾರ್ ವಾದ್ಯವನ್ನು ಹೊಂದಿರುವ ದೇಶ – **ಫಿಲಿಪ್ಪೈನ್ಸ್**

ಮೊಲ ಬೆದರಿದಾಗ 10 ಅಡಿಗಿಂತಲೂ ಎತ್ತರ ಹಾರಬಲ್ಲದು.

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*

*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*